ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಆಗಸ್ಟ್ 06, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 84 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999

## ಗ್ಯಾರಂಟಿಗಳಿಂದ ಅಭಿವೃದ್ಧಿಗೆ ಹಿನ್ನಡೆಯಾಗದು

### 'ಗೃಹಜ್ಯೋತಿ' ಉದ್ಘಾಟನಾ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ



ಬೆಂಗಳೂರು, ಆ.5 - ಗ್ಯಾರಂಟಿ ಯೋಜನೆ ಗಳಿಂದ ರಾಜ್ಯದ ಅಭಿವೃದ್ಧಿಗೆ ಹಿನ್ನಡೆಯಾಗುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಬಿಜೆಪಿಗೆ ತಾಕತ್ತಿದ್ದರೆ ಐದು ಗ್ಯಾರಂಟಿಗಳನ್ನು ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಜಾರಿ ಮಾಡುವ ತೀರ್ಮಾನ ಮಾಡಲಿ ಎಂಬ ಸವಾಲು ಹಾಕಿದ್ದಾರೆ. ಗೃಹಜ್ಯೋತಿ ಯೋಜನೆಯ ಫಲಾನುಭವಿಗಳಿಗೆ ಉಚಿತ್ ವಿದ್ಯುತ್ ನೀಡುತ್ತಿರುವ ಶೂನ್ಯ ಬಿಲ್ ನೀಡಿ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಅವರು, ವಿಧಾನಸಭೆ ಚುನಾವಣೆಯಲ್ಲಿ ಜನರಿಗೆ ಭರವಸೆ ನೀಡಿದಂತೆ 5 ಗ್ಯಾರಂಟಿಗಳನ್ನು ನೀಡುತ್ತೇವೆ ಎಂದರು.

ಗ್ಯಾರಂಟಿಗಳನ್ನು ಜಾರಿ ಮಾಡಿದರೆ ರಾಜ್ಯ ದಿವಾಳಿ ಆಗುತ್ತದೆ ಎಂದು ಉಯಿಲೆಬ್ಬಿಸುತ್ತಿದ್ದಾರೆ. ಈ ಯೋಜನೆಗಳಿಂದ ರಾಜ್ಯ ದಿವಾಳಿ ಆಗುವುದಿಲ್ಲ.

ಈ ದೇಶವನ್ನು ದಿವಾಳಿ ಮಾಡಿರುವುದು ಪ್ರಧಾನಿ ನರೇಂದ್ರ ಮೋದಿ. ಕರ್ನಾಟಕದಲ್ಲಿ ಈ ಹಿಂದೆ ಎಲ್ಲಾ ಭರವಸೆಗಳನ್ನು ಈಡೇರಿಸಿದಾಗಲೂ ಆರ್ಥಿಕವಾಗಿ ಸುಭದ್ರವಾಗಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾಗ ರಾಜ್ಯದ ಸಂಪತ್ತು ಲೂಟಿ ಮಾಡಿ, ನಿರುದ್ಯೋಗ ಸೃಷ್ಟಿಸಿ, ಬೆಲೆ ಏರಿಕೆ ಮಾಡಿ ಬಡ ಜನರಿಗೆ ಅನ್ಯಾಯ ಮಾಡಿದ್ದಾರೆ ಎಂದು ಆರೋಪಿಸಿದರು.

ನಾವು ಯೋಜನೆಗಳಿಗೆ ಅಗತ್ಯವಾದ ಹಣ ಕ್ರೋಡೀಕರಿಸುವುದರ ಜೊತೆಗೆ ಎಂದಿನಂತೆ (3ನೇ ಪುಟಕ್ಕೆ)

## ನಾಲೆಗಳಿಗೆ 100 ದಿನ ನೀರು ಹರಿಸಲು ಅನುಮೋದನೆಗಾಗಿ ಭದ್ರಾ ಸಿಇಗೆ ಪತ್ರ

**ಆಗಸ್ಟ್ 10 ರಿಂದ ನೀರು ಹರಿಸುವಂತೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಶಾಸಕ ಬಿ.ಪಿ.ಹರೀಶ್, ಅಚ್ಚುಕಟ್ಟಿನ ಜನಪ್ರತಿನಿಧಿಗಳು, ರೈತ ಮುಖಂಡರ ಒತ್ತಾಯ**

ಮಲೇಬೆನ್ನೂರು, ಆ.5- ಭದ್ರಾ ಜಲಾಶಯ ಪ್ರಸ್ತುತ 164 ಅಡಿ 5 ಇಂಚು (47.152 ಟಿಎಂಸಿ) ನೀರಿದ್ದು, ಮುಂಗಾರು ಹಂಗಾಮಿನ ಬೆಳೆಗಳಿಗೆ 100 ದಿನ ನಾಲೆಗಳಿಗೆ ನೀರು ಹರಿಸಲು ಸರ್ಕಾರದಿಂದ ಅನುಮೋದನೆ ದೊರಕಿಸಿಕೊಡುವಂತೆ ಭದ್ರಾ ಅಧೀಕ್ಷಕ ಅಭಿಯಂತರರೂ ಆದ ಕಾಡಾ ಸಮಿತಿಯ ಸದಸ್ಯ ಕಾರ್ಯದರ್ಶಿ ಸುನೀತಾ ಅವರು, ಭದ್ರಾ ಮುಖ್ಯ ಇಂಜಿನಿಯರ್ ಅವರಿಗೆ ಪತ್ರ ಬರೆದಿದ್ದಾರೆ.

ಜಲಾಶಯದ ನೀರಿನ ಮಟ್ಟ 160 ಕಡಿಮೆ ಇದ್ದ 2010-11, 2011-12, 2012-13, 2013-14, 2015-16 ಮತ್ತು 2016-17ನೇ ಸಾಲಿನಲ್ಲಿ ಮುಂಗಾರು ಹಂಗಾಮಿನ ಬೆಳೆಗಳಿಗಾಗಿ ನಾಲೆಗಳಿಗೆ ನೀರು ಹರಿಸಿರುವ ಉದಾಹರಣೆಗಳಿವೆ.

ಪ್ರಸ್ತುತ ಜಲಾಶಯದಲ್ಲಿರುವ 47.152 ಟಿಎಂಸಿ ನೀರಿನಲ್ಲಿ ಜಲಾಶಯದಲ್ಲಿ ಸಂಗ್ರಹವಾಗಿರುವ ಹೂಳಿನ ಪ್ರಮಾಣ 4.18 ಟಿಎಂಸಿ, ಬಳಕೆಗೆ ಬಾರದ ಡಿಬ್ಲ್ಯೂಎಲ್ ನೀರು 13.832 ಟಿಎಂಸಿ ತೆಗೆದರೆ 29.14 ಟಿಎಂಸಿ ನೀರು ಬಳಕೆ ಬರುತ್ತದೆ. ಇದರಲ್ಲಿ ಮುಂಗಾರು ಹಂಗಾಮಿಗೆ (100 ದಿನಗಳಿಗೆ) ನಾಲೆಗಳಿಗೆ ಹರಿಸಲು 26.10 ಟಿಎಂಸಿ ನೀರು ಬೇಕಾಗುತ್ತದೆ. ಕುಡಿಯುವ ನೀರು ಹಾಗೂ ಕೈಗಾರಿಕೆಗಳಿಗೆ 7.04 ಟಿಎಂಸಿ, ಆಗಸ್ಟ್‌ನಿಂದ ಡಿಸೆಂಬರ್‌ವರೆಗೆ ಆವಿಯಾಗುವ ನೀರಿನ ಪ್ರಮಾಣ 1.72 ಟಿಎಂಸಿ ಸೇರಿ ಒಟ್ಟು 34.86 ಟಿಎಂಸಿ ನೀರಿನ ಅವಶ್ಯಕತೆ ಇರುತ್ತದೆ. ಈಗಿರುವ ನೀರಿನ ಪ್ರಮಾರ 5.72 ಟಿಎಂಸಿ ನೀರಿನ ಕೊರತೆಯಾಗಬಹುದೆಂದೂ ಪತ್ರದಲ್ಲಿ ತಿಳಿಸಲಾಗಿದೆ.

ಭದ್ರಾ ಕಾಡಾ ಸಮಿತಿ ಅಸ್ತಿತ್ವದಲ್ಲಿ ಇಲ್ಲದ ಕಾರಣ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ (4ನೇ ಪುಟಕ್ಕೆ)

## ರೈತರ ಹಿತಕಾಯಲು ಕೇಂದ್ರ ಸರ್ಕಾರ ಬದ್ಧ: ಸಿದ್ದೇಶ್ವರ



ದಾವಣಗೆರೆ, ಆ.5- ಕೇಂದ್ರ ಸರ್ಕಾರ ರೈತರ ಹಿತ ಕಾಯಲು ಸದಾ ಬದ್ಧವಾಗಿದೆ. ಈ ನಿಟ್ಟಿನಲ್ಲಿಯೇ ಕಳೆದ 9 ವರ್ಷಗಳಿಂದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಲವಾರು ರೈತಪರ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದರು.

ಶನಿವಾರ ರೈತ ಸಂಘದವರು ತೆಂಗು ಬೆಳೆಗಾರರ ಸಮಸ್ಯೆಗಳನ್ನು ಕುರಿತು ಮನವಿ ಸಲ್ಲಿಸಲು ಸಂಸದರ ಕಚೇರಿಗೆ ಆಗಮಿಸಿದ್ದ ಸಂದರ್ಭದಲ್ಲಿ ಅವರು ಮಾತನಾಡಿದರು.

ರೈತ ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ದೊರೆಯಬೇಕು. ರೈತ ಬೆಳೆದ ಬೆಳೆಗಳನ್ನು ರೈತ ತನಗಿಷ್ಟ ಬಂದ ಕಡೆ ಮಾರಾಟ ಮಾಡಬೇಕು ಎನ್ನುವ ಕಾರಣದಿಂದ ಕೃಷಿ ಮಾರುಕಟ್ಟೆ ನೀತಿಯನ್ನು ತಿದ್ದುಪಡಿ ಮಾಡಲಾಗಿತ್ತು, ಆದರೆ ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಕೃಷಿ ಮಾರುಕಟ್ಟೆ ನೀತಿ ತಿದ್ದುಪಡಿಯನ್ನು ಹಿಂತೆಗೆಯುವ ಪ್ರಯತ್ನ ಮಾಡುತ್ತಿದೆ. ಇದು ರೈತರಿಗೆ ಮಾಡುತ್ತಿರುವ ಘೋರ ಅನ್ಯಾಯವಾಗಿದೆ. ರೈತ ತನಗೆ ಇಷ್ಟ ಬಂದಕಡೆ ಬೆಳೆಗಳನ್ನು ಮಾರುವ ಅಧಿಕಾರವನ್ನು ಕಾಂಗ್ರೆಸ್ ಸರ್ಕಾರ ಕಿತ್ತುಕೊಳ್ಳುವ ಪ್ರಯತ್ನವನ್ನು ಮಾಡುತ್ತಿದೆ ಎಂದರು.

ಕೇಂದ್ರ ಸರ್ಕಾರ ಹಲವಾರು ಯೋಜನೆಗಳ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸುವತ್ತ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ 2022-23 ನೇ ಸಾಲಿಗೆ ದಾವಣಗೆರೆ ಜಿಲ್ಲೆಯಲ್ಲಿ ನೊಂದಣಿ ಮಾಡಿಸಿದ 39 ಸಾವಿರ ರೈತರಲ್ಲಿ 24 ಸಾವಿರ ರೈತರಿಗೆ ಸುಮಾರು 31 ಕೋಟಿ ರೂ. ಪರಿಹಾರ ಧನ ಮಂಜೂರಾಗಿದೆ. 2023-24 (3ನೇ ಪುಟಕ್ಕೆ)

## ಶ್ರೀಮತಿ ಯಮ್ಮಿ ಗಿರಿಜಮ್ಮ ನಿಧನ



ದಾವಣಗೆರೆ ವಿದ್ಯಾನಗರ ಕೆನರಾ ಬ್ಯಾಂಕ್ ಎದುರು, ಮನೆ ನಂ. 3903 ವಾಸಿಯಾದ
ದಿ. ಯಮ್ಮಿ ಬಸವರಾಜಪ್ಪನವರ ಧರ್ಮಪತ್ನಿ
**ಶ್ರೀಮತಿ ಯಮ್ಮಿ ಗಿರಿಜಮ್ಮ**
ಇವರು ದಿನಾಂಕ 06.08.2023ನೇ ಭಾನುವಾರ ಬೆಳಗಿನಜಾವ ಶಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 96 ವಯಸ್ಸಾಗಿತ್ತು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳನ್ನು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 06.08.2023ರ ಭಾನುವಾರ ಮಧ್ಯಾಹ್ನ 2 ಗಂಟೆಗೆ ಶಾಮನೂರು ವೀರಶೈವ ರುದ್ರಭೂಮಿಯಲ್ಲಿ ನಡೆಯುವುದು.
ಮೃತರ ಪಾರ್ಥಿವ ಶರೀರವನ್ನು ಮಗಳು ಶ್ರೀಮತಿ ಪುಷ್ಪಾ ಶಂಕರ್ ಅವರ ಮೇಲಿನ ವಿಳಾಸದ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿದೆ.
ಇಂತಿ ದುಃಖತಪ್ತರು : ಫೋನ್ : 73536 23350, 94801 83924

## ಪ್ರಥಮ ವರ್ಷದ ಪುಣ್ಯಸ್ಮರಣೆ



**ದಿ|| ಶ್ರೀಮತಿ ಸುಶೀಲಮ್ಮನವರು**
(ದಿ|| ಶ್ರೀ ಬಸವರಾಜಪ್ಪ, ನಾಡಿಗರ್ ಇವರ ಧರ್ಮಪತ್ನಿ)
ಮರಣ : 06.08.2022
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನಿಮ್ಮ ಪ್ರೀತಿ, ಮಮತೆ, ಸವಿನೆನಪು ನಮ್ಮೆಲ್ಲರನ್ನು ಸದಾ ಕಾಡುತ್ತಿರುತ್ತದೆ.
ಸದಾ ನಿಮ್ಮ ಸ್ಮರಣೆಯಲ್ಲಿರುವ...
ಶ್ರೀ ಶಿವದೇವಪ್ಪ ಮತ್ತು ಶ್ರೀಮತಿ ಶಾರದಮ್ಮ
ಶ್ರೀ ರುದ್ರೇಶ ನಾಡಿಗರ್ ಮತ್ತು ಶ್ರೀಮತಿ ಸೌಮ್ಯ
ಶ್ರೀ ತರುಣ ನಾಡಿಗರ್, ನಾಡಿಗರ್ ವಂಶಸ್ಥರು ಹಾಗೂ
ಬಂಧು-ಮಿತ್ರರು, ಎಸ್.ಎಸ್. ಹೈಟೆಕ್ ಲೇ ಔಟ್, ಶಿರಮಗೊಂಡನಹಳ್ಳಿ, ದಾವಣಗೆರೆ.

## ಪಾಕ್ ಮಾಜಿ ಪ್ರಧಾನಿ ಖಾನ್‌ಗೆ 3 ವರ್ಷ ಜೈಲು



ಇಸ್ಲಾಮಾಬಾದ್, ಆ. 5 - ತೋಶಖಾನಾ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್‌ಗೆ 3 ವರ್ಷಗಳ ಜೈಲು ಶಿಕ್ಷೆಯಾಗಿದ್ದು, ಅವರನ್ನು ಬಂಧಿಸಲಾಗಿದೆ.

ಇಸ್ಲಾಮಾಬಾದ್‌ನ ಜಿಲ್ಲಾ ಹೆಚ್ಚುವರಿ ನ್ಯಾಯಮೂರ್ತಿ ಹುಮಾಯೂನ್ ದಿಲಾವರ್ ಅವರು ಶಿಕ್ಷೆ ವಿಧಿಸಿದ್ದು, ಲಕ್ಷ ರೂ.ಗಳ ದಂಡವನ್ನೂ ವಿಧಿಸಿದ್ದಾರೆ.

ಪಿ.ಟಿ.ಐ. ಪಕ್ಷದ ಅಧ್ಯಕ್ಷರಾದ ಇಮ್ರಾನ್ ಖಾನ್, ಉದ್ದೇಶಪೂರ್ವಕವಾಗಿ ತಮಗೆ ದೊರೆತ ಕೊಡುಗೆಗಳ ಬಗ್ಗೆ ಚುನಾವಣಾ ಆಯೋಗಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಇದರಲ್ಲಿ ಭ್ರಷ್ಟಾಚಾರ ನಡೆದಿರುವುದು ಕಂಡು ಬಂದಿದೆ ಎಂದು (3ನೇ ಪುಟಕ್ಕೆ)

## ಏಕರೂಪ ನಾಗರಿಕ ಸಂಹಿತೆಯಿಂದ ದೇಶದ ವೈವಿಧ್ಯತೆಗೆ ಧಕ್ಕೆಯಾಗದು

**'ಏಕರೂಪ ನಾಗರೀಕ ಸಂಹಿತೆ ಸಂವಾದ' ಕಾರ್ಯಕ್ರಮದಲ್ಲಿ ಲಕ್ಷ್ಮೀ ನಾರಾಯಣ ಹೆಗಡೆ**

ದಾವಣಗೆರೆ, ಆ. 5- ಏಕರೂಪ ನಾಗರೀಕ ಸಂಹಿತೆ ಜಾರಿಗೆ ತರುವುದರಿಂದ ದೇಶದಲ್ಲಿನ ವೈವಿಧ್ಯತೆಗೆ ಯಾವುದೇ ತೊಂದರೆಯಾಗದು ಎಂದು ರಾಜ್ಯ ಉಚ್ಚ ನ್ಯಾಯಾಲಯದ ಹಿರಿಯ ವಕೀಲರು, ಅಧಿವಕ್ತಾ ಪರಿಷತ್ ಕ್ಷೇತ್ರಿಯ ಕಾರ್ಯದರ್ಶಿಗೂ ಆದ ಲಕ್ಷ್ಮಿ ನಾರಾಯಣ ಎನ್. ಹೆಗಡೆ ಹೇಳಿದರು.

ಅಧಿವಕ್ತಾ ಪರಿಷತ್ ವತಿಯಿಂದ ಶನಿವಾರ ಸಂಜೆ ನಗರದ ರೋಟರಿ ಬಾಲ ಭವನದಲ್ಲಿ ಹಮ್ಮಿಕೊಂಡಿದ್ದ 'ಏಕರೂಪ ನಾಗರಿಕ ಸಂಹಿತೆ - ಸಂವಾದ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಕಾನೂನಿಂದ ವೈವಿಧ್ಯತೆಗೆ ಅಪಾಯವಾಗುತ್ತದೆ ಎಂಬುದು ತಪ್ಪು ಕಲ್ಪನೆ ಎಂದರು.

ಬಲಿಷ್ಠ ಭಾರತ ನಿರ್ಮಾಣಕ್ಕಾಗಿ ಏಕರೂಪ ನಾಗರೀಕ ಸಂಹಿತೆ ಜಾರಿ ಆಗಬೇಕಾದ ಅಗತ್ಯವಿದೆ. ಈ ಕಾನೂನು ಯಾವುದೇ ಧರ್ಮ, ಜಾತಿ, ಮತಗಳ ಧಾರ್ಮಿಕತೆಗೆ ಕುರಿತಾಗಿ ಇಲ್ಲ. ಇದರಿಂದ ಯಾರಿಗೂ ಯಾವ ರೀತಿಯಿಂದಲೂ ಅನ್ಯಾಯವಾಗುವುದಿಲ್ಲ ಎಂದು ಪ್ರತಿಪಾದಿಸಿದರು. (2ನೇ ಪುಟಕ್ಕೆ)

## ಬ್ರಾಡ್‌ಬ್ಯಾಂಡ್‌ಗೆ 1.39 ಲಕ್ಷ ಕೋಟಿ ರೂ.

ನವದೆಹಲಿ, ಆ. 5 - ದೇಶದ 6.4 ಲಕ್ಷ ಗ್ರಾಮಗಳಿಗೆ ಬ್ರಾಡ್ ಬ್ಯಾಂಡ್ ಸೌಲಭ್ಯ ಕಲ್ಪಿಸುವ 1.39 ಲಕ್ಷ ಕೋಟಿ ರೂ.ಗಳ ಯೋಜನೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ.

ಪ್ರಸಕ್ತ ಭಾರತ್‌ನೆಟ್ ಯೋಜನೆಯಡಿ 1.94 ಲಕ್ಷ ಹಳ್ಳಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲಾಗಿದೆ. ಉಳಿದ ಗ್ರಾಮಗಳಿಗೆ ಎರಡೂವರೆ ವರ್ಷಗಳಲ್ಲಿ ಸಂಪರ್ಕ ಲಭ್ಯವಾಗುವ ನಿರೀಕ್ಷೆ ಇದೆ.

ಎಲ್ಲಾ ಗ್ರಾಮಗಳಿಗೆ ಕೊನೆ ಹಂತದವರೆಗೂ (2ನೇ ಪುಟಕ್ಕೆ)

## ಚಂದ್ರನ ಕಕ್ಷೆ ಸೇರಿದ ಚಂದ್ರಯಾನ

ಬೆಂಗಳೂರು, ಆ. 5 - ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋದ ಗಗನನೌಕೆಯಾದ ಚಂದ್ರಯಾನ - 3 ಯಶಸ್ವಿಯಾಗಿ ಚಂದ್ರನ ಕಕ್ಷೆಗೆ ಸೇರ್ಪಡೆಯಾಗಿದೆ. ನಾಳೆ ಭಾನುವಾರ ರಾತ್ರಿ 11 ಗಂಟೆಗೆ ಕಕ್ಷೆಯನ್ನು ಬದಲಿಸುವ ಮುಂದಿನ ಕಾರ್ಯಾಚರಣೆ ನಡೆಯಲಿದೆ. ಇನ್ನೂ 4 ಸುತ್ತುಗಳಲ್ಲಿ (4ನೇ ಪುಟಕ್ಕೆ)

## ಅಗ್ನಿವೀರರ ತಂಡದ ತರಬೇತಿ ಪೂರ್ಣ


ರಾಮಘಡ್, ಆ. 5 - ಅಗ್ನಿವೀರರ ಮೊದಲ ತಂಡ ಜಾರ್ಖಂಡ್‌ನ ರಾಮಘಡ ಜಿಲ್ಲೆ ಯಲ್ಲಿ ತರಬೇತಿ ಅವಧಿಯನ್ನು ಪೂರ್ಣ ಗೊಳಿಸಿದ್ದು, 704 ಅಗ್ನಿವೀರರ 2 ರೆಜಿಮೆಂಟ್‌ಗಳು ಸೈನ್ಯ ಸೇರ್ಪಡೆಗೆ ಸಜ್ಜಾಗಿವೆ.

ಇವರಲ್ಲಿ ಸಿಖ್ ರೆಜಿಮೆಂಟ್‌ನ 520 ಹಾಗೂ ಪಂಜಾಬ್ ರೆಜಿಮೆಂಟ್‌ನ 184 ಅಗ್ನಿವೀರರಿದ್ದಾರೆ. ಶನಿವಾರ 2 ಪ್ರತ್ಯೇಕ ಸಮಾರಂಭಗಳಲ್ಲಿ ಪಾಸಿಂಗ್ ಪರೇಡ್ ನಡೆಸಲಾಗಿದೆ.

|| ಶ್ರೀ ಸಿದ್ದರಾಮೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ನಗರ ಆನೆಕೊಂಡ ಗ್ರಾಮದ ವಾಸಿ
ರಾಮಗಿರಿ ದಿ|| ಎ.ಆರ್. ಬಸಪ್ಪನವರ ತಮ್ಮನಾದ
ದಿ|| ಎಂ.ಆರ್.ರಾಜಶೇಖರಪ್ಪನವರ ಧರ್ಮಪತ್ನಿ
ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 24.07.2023ನೇ ಸೋಮವಾರ ರಾತ್ರಿ 07.15ಕ್ಕೆ ನನ್ನ ಪೂಜ್ಯ ಪತಿಯವರಾದ



ಜನನ : 1946
ಲಿಂಗೈಕ್ಯ : 24-07-2023

**ಶ್ರೀ ಎಂ.ಆರ್. ರಾಜಶೇಖರಪ್ಪನವರು**

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 06.08.2023ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಶ್ರೀ ನಿಮಿಷಾಂಬ ಸಮುದಾಯ ಭವನ, ಶ್ರೀ ಶಾರದಾಂಬ ದೇವಸ್ಥಾನ ಪಕ್ಕ, ರಿಂಗ್ ರಸ್ತೆ, ನಿಜಲಿಂಗಪ್ಪ ಬಡಾವಣೆ ಇಲ್ಲಿ ನೆರವೇರಿಸಲಿದ್ದು, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

- : ಇಂತಿ ದುಃಖತಪ್ತರು : -
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ರಾಮಗಿರಿ ವಂಶಸ್ಥರು, ಆನೆಕೊಂಡ ಹಾಗೂ ಬಂಧು-ಮಿತ್ರರು. ಮೊ : 99000 94055

ವಿ.ಸೂ. : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಿ, ಮೃತರಿಗೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.



# ಮಹಿಳೆಯರ ಸಬಲೀಕರಣದಿಂದ ಊರು ಕೂಡಾ ಪ್ರಗತಿ ಕಾಣುತ್ತೆ

## ಜಿ.ಬೇವಿನಹಳ್ಳಿ : ಪುಷ್ಪಗಿರಿ ಯೋಜನೆಯ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಚಾಲನೆ ನೀಡಿದ ಶಾಸಕ ಹರೀಶ್



ಮಲೇಬೆನ್ನೂರು, ಆ.5- ಮಹಿಳೆಯರ ಸಬಲೀಕರಣದಿಂದ ಮನೆ ಅಷ್ಟೇ ಅಲ್ಲ, ಊರು ಕೂಡಾ ಪ್ರಗತಿ ಕಾಣುತ್ತದೆ ಎಂದು ಶಾಸಕ ಬಿ.ಪಿ.ಹರೀಶ್ ಅಭಿಪ್ರಾಯಪಟ್ಟರು.

ಅವರು ಶನಿವಾರ ಜಿ.ಬೇವಿನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಶ್ರೀ ಕ್ಷೇತ್ರ ಪುಷ್ಪಗಿರಿ ಗ್ರಾಮಾಭಿವೃದ್ಧಿ ಯೋಜನೆಯ 4 ಮಹಿಳಾ ಸ್ವ-ಸಹಾಯಗಳನ್ನು ದೀಪ ಬೆಳಗಿಸಿ, ಉದ್ಘಾಟಿಸಿ ಮಾತನಾಡಿದರು.

ಆರಂಭದಲ್ಲಿ ಸರ್ಕಾರದಿಂದ ಸ್ತ್ರೀ ಶಕ್ತಿ ಸಂಘಗಳನ್ನು ಪ್ರಾರಂಭಿಸಿ, ಅವುಗಳಿಗೆ ಶಕ್ತಿ ನೀಡಲಾಯಿತು. ನಂತರ ಡಾ. ವೀರೇಂದ್ರ ಹೆಗ್ಗಡೆ ಅವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಮಹಿಳೆಯರಿಗೆ ಸಾಕಷ್ಟು ಶಕ್ತಿ ತಂದುಕೊಟ್ಟಿದ್ದಾರೆ. ಶ್ರೀ ಸೋಮಶೇಖರ ಶಿವಾಚಾರ್ಯ ಸ್ವಾಮೀಜಿ ತಮ್ಮ ಕಿರಿಯ ವಯಸ್ಸಿನಲ್ಲೇ ಹಾಸನ ಜಿಲ್ಲೆಯಲ್ಲಿ ಗಮನ ಸೆಳೆಯುವಂತ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಜೊತೆಗೆ ಧರ್ಮಸ್ಥಳ ಯೋಜನೆಯ ಮಾದರಿಯಲ್ಲೇ ಶ್ರೀ ಕ್ಷೇತ್ರ ಪುಷ್ಪಗಿರಿ ಗ್ರಾಮಾಭಿವೃದ್ಧಿ ಯೋಜನೆ ಸ್ಥಾಪಿಸಿ, ಈಗಾಗಲೇ ರಾಜ್ಯದ 8-9 ಜಿಲ್ಲೆಗಳಲ್ಲಿ ಕಾರ್ಯಾರಂಭಿಸಿರುವುದು ಶ್ಲಾಘನೀಯ ಎಂದರು.

ಇಲ್ಲಿ ಮಹಿಳೆಯರು ಸಂಘಟನೆಯಿಂದ ಸ್ವ-ಉದ್ಯೋಗಕ್ಕೆ ಮುಂದಾಗಿರುವುದು ಮಾದರಿ ಎಂದು ಹರೀಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಕೆ.ಮಹೇಶ್ವರಪ್ಪ ಮಾತನಾಡಿ, ಆಗಸ್ಟ್ ಕೊನೆಯ ವಾರದಲ್ಲಿ ಕೊಮಾರನಹಳ್ಳಿ ಅಥವಾ ಕೊಕ್ಕನೂರಿನಲ್ಲಿ ಶ್ರೀ ಕ್ಷೇತ್ರ ಪುಷ್ಪಗಿರಿ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಸಂಘಗಳ ಜಿಲ್ಲಾ ಸಮಾವೇಶ ಮಾಡುವುದಾಗಿ ಹೇಳಿದರು.

ನಂದಿ ಸೌಹಾರ್ದ ಸಹಕಾರಿ ಮಾಜಿ ಅಧ್ಯಕ್ಷ ಜಿಗಳಿ ಇಂದೂಧರ್ ಮಾತನಾಡಿ, ಈ ಯೋಜನೆಯ ಮಹಿಳಾ ಸ್ವ-ಸಹಾಯ ಸಂಘಗಳಿಗೆ ನಮ್ಮ ಸಹಕಾರಿಯಿಂದ 1 ಲಕ್ಷ ರೂ.ಸಾಲ ಸೌಲಭ್ಯವನ್ನು ಕಡಿಮೆ ಬಡ್ಡಿ ದರದಲ್ಲಿ ನೀಡುತ್ತೇವೆ ಎಂದರು.

ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ನಾಗಯ್ಯ, ಜಿಲ್ಲಾ ನಿರ್ದೇಶಕ ಎಂ.ಹೆಚ್.ಅಡವಿ ಮಾತನಾಡಿ, ಯೋಜನೆಯ ಪ್ರಗತಿ ಬಗ್ಗೆ ತಿಳಿಸಿದರು.

ನಂದಿ ಸೌಹಾರ್ದ ಸಹಕಾರಿ ನಿರ್ದೇಶಕ ಸಂತೋಷ್ ಪಾಳೇದ್, ಗ್ರಾಮದ ರವಿಗೌಡ, ದೋಣೇರ ವೀರಪ್ಪ, ಪೂಜಾರಪ್ಪರ ಸಿದ್ಲಿಂಗಪ್ಪ, ಜಿಗಳಿಯ ಜಿ.ಪಿ.ಹನುಮಗೌಡ ಮತ್ತು ಗುಡ್ಡೇಹಳ್ಳಿಯ ವೀರನಗೌಡ ವೇದಿಕೆಯಲ್ಲಿದ್ದರು. ಪ್ರೀತಿ ಪಾಟೀಲ್ ನಿರೂಪಿಸಿದರು.

# ಹರಿಹರದಲ್ಲಿ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ



ಹರಿಹರ, ಆ. 5- ನಗರದ ಹೈಸ್ಕೂಲ್ ಬಡಾವಣೆಯ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸವಿತಾ ಸಮಾಜದ ವತಿಯಿಂದ, ಆಂಜನೇಯ ಸ್ವಾಮಿ ದೇವರಿಗೆ ವಿಶೇಷ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಹಾಗೂ ಸಾಮೂಹಿಕ ಸತ್ಯನಾರಾಯಣ ಪೂಜೆ ಕಾರ್ಯಕ್ರಮ ನಡೆಸಲಾಯಿತು.

ಈ ಸಂದರ್ಭದಲ್ಲಿ ಶಾಸಕ ಬಿ.ಪಿ. ಹರೀಶ್, ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್, ಸವಿತಾ ಸಮಾಜದ ಪದಾಧಿಕಾರಿಗಳಾದ ಅಧ್ಯಕ್ಷ ರಾಜುಗೌಡ, ಉಪಾಧ್ಯಕ್ಷ ಯು.ಹೆಚ್. ರಾಜು, ಪ್ರಧಾನ ಕಾರ್ಯದರ್ಶಿ ತಿಮ್ಮಪ್ಪ,ಕಾರ್ಯದರ್ಶಿ ವೈ.ಎನ್. ಮಂಜುನಾಥ್, ಖಜಾಂಚಿ ಗೋಪಾಲಸ್ವಾಮಿ, ಶಿರಡಿ, ಆನಂದ್, ಪ್ರದೀಪ್, ಬಾಲು, ಸಂತೋಷ, ಮಹಿಳಾ ಘಟಕದ ರುಕ್ಮಿಣಿ, ಮಂಜುಳಾ, ಗಿರಿಜಮ್ಮ, ಕವಿತಾ, ರಮ್ಯ, ಗೀತಾ, ಸೋಮೇಶ್ವರಿ, ಹೇಮಾ, ಶಾರದಮ್ಮ, ಮಂಜುಳಾ ಇತರರು ಹಾಜರಿದ್ದರು.

# ಲ್ಯಾಪ್‌ಟಾಪ್, ಕಂಪ್ಯೂಟರ್ ಆಮದು ನಿರ್ಬಂಧ ಮುಂದೂಡಿಕೆ

ನವದೆಹಲಿ, ಆ. 5 - ಲ್ಯಾಪ್‌ಟಾಪ್, ಟ್ಯಾಬ್ ಹಾಗೂ ಕಂಪ್ಯೂಟರ್‌ಗಳ ಆಮದು ಮೇಲಿನ ನಿರ್ಬಂಧ ಜಾರಿಯನ್ನು ಕೇಂದ್ರ ಸರ್ಕಾರ ಅಕ್ಟೋಬರ್ 31ರವರೆಗೆ ಮುಂದೂಡಿದೆ. ಇದರಿಂದಾಗಿ ಎಲೆಕ್ಟ್ರಾನಿಕ್ ಕಂಪನಿಗಳು ಅನುಮತಿ ರಹಿತವಾಗಿ ಈ ಉಪಕರಣಗಳನ್ನು ಆಮದು ಮಾಡಿಕೊಳ್ಳಲು ಹೆಚ್ಚು ಸಮಯ ಸಿಗಲಿದೆ. ನವೆಂಬರ್ 1ರ ನಂತರ ಕಂಪನಿಗಳು ಈ ಉಪಕರಣಗಳನ್ನು ಆಮದು ಮಾಡಿಕೊಳ್ಳಲು ಸರ್ಕಾರದಿಂದ ಅನುಮತಿ ಪಡೆಯಬೇಕಿದೆ. ಆಗಸ್ಟ್ 3ರಂದು ಕೇಂದ್ರ ಸರ್ಕಾರ ತಕ್ಷಣದಿಂದ ಜಾರಿಗೆ ಬರುವಂತೆ ಆಮದು ಮೇಲೆ ನಿರ್ಬಂಧ ಹೇರಿತ್ತು. ಇದರಿಂದ ಆಗುವ ತೊಡಕುಗಳ ಬಗ್ಗೆ ಕೈಗಾರಿಕಾ ವಲಯ ಸರ್ಕಾರದ ಗಮನ ಸೆಳೆದಿತ್ತು. ನಂತರ ಸರ್ಕಾರ ನಿರ್ಬಂಧ ಜಾರಿ ದಿನಾಂಕವನ್ನು ಮುಂದೂಡಿದೆ. ರಕ್ಷಣಾ ಕಾರಣಗಳಿಂದಾಗಿ ಆಮದಿನ ಮೇಲೆ ನಿರ್ಬಂಧ ಹೇರುವುದಾಗಿ ಕೇಂದ್ರ ಸರ್ಕಾರ ತಿಳಿಸಿತ್ತು. ಸರ್ಕಾರದ ಕ್ರಮದಿಂದ ಚೀನಾ ಹಾಗೂ ಕೊರಿಯಾದಂತಹ ದೇಶಗಳಿಂದ ಆಗುವ ಆಮದಿಗೆ ಕಡಿವಾಣ ಬೀಳಲಿದೆ.

# ನಗರದಲ್ಲಿ ಇಂದು ಆರೋಗ್ಯ ತಪಾಸಣೆ

ಹೋಮಿಯೋಪಥಿ ವೈದ್ಯಕೀಯ ಸಂಘ, ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿಯಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಮಾವಿ ಶೆಟ್ಟರ್, ಡಾ. ಕೆ.ಆರ್. ಶರತ್‌ರಾಜ್, ಡಾ. ಸಿ.ಎನ್.ಕೋಟಿಹಾಳ್, ಡಾ. ಎ.ಎನ್. ಸುಂದರೇಶ್, ಡಾ. ಆರತಿ ಸುಂದರೇಶ್, ಡಾ. ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್. ರಂಗರಾಜನ್ ತಪಾಸಣೆ ನಡೆಸುವರು. ಸಂಪರ್ಕಿಸಿ : 63631 51534.

# ವಕೀಲರ ಪರಿಷತ್ತಿನ ಸಮಾವೇಶಕ್ಕೆ ಡಿಕೆಶಿ

**ಪ್ರಕರಣಗಳ ಎದುರಿಸುತ್ತಿರುವವರಿಗೆ ಆಹ್ವಾನ ನೀಡಿರುವುದಕ್ಕೆ ತೀವ್ರ ವಿರೋಧ**

ಬೆಂಗಳೂರು, ಆ.5 - ಮೈಸೂರಿನಲ್ಲಿ ನಡೆಯಲಿರುವ ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ (ಕರ್ನಾಟಕ ಬಾರ್ ಕೌನ್ಸಿಲ್) ಸಮಾವೇಶದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸುತ್ತಿರುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿದೆ.

ಆ.12ರಂದು ಪರಿಷತ್ತಿನ 10ನೇ ಸಮಾವೇಶ ನಡೆಯುತ್ತಿದ್ದು, ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಬೋಪಣ್ಣ, ರಾಜ್ಯ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ ವರಲೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಭಾಗವಹಿಸುವ ಈ ಸಮಾವೇಶದಲ್ಲಿ ಶಿವಕುಮಾರ್ ಉಪಸ್ಥಿತಿ ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆ ಎದ್ದಿದೆ.

ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟಿನಲ್ಲಿ ಶಿವಕುಮಾರ್ ವಿರುದ್ಧದ ಹಲವು ಪ್ರಕರಣಗಳು ಇತ್ಯರ್ಥವಾಗಿಲ್ಲ. ಜತೆಗೆ ಇವರ ವಿರುದ್ಧ ಸಿಬಿಐ ಮತ್ತು ಇಡಿ ಮೊಕದ್ದಮೆಗಳನ್ನು ದಾಖಲಿಸಿವೆ.

ಹೈಕೋರ್ಟ್ ಇಲ್ಲವೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇದ್ದವರ ಜೊತೆಗಿನ ವೇದಿಕೆಯನ್ನು ನ್ಯಾಯಮೂರ್ತಿಗಳು ಹಂಚಿಕೊಳ್ಳುವುದಿಲ್ಲ.

ಅವರು ವೇದಿಕೆ ಹತ್ತುವುದಕ್ಕೆ ಮುನ್ನ ಕಾನೂನು ಇಲಾಖೆ ಎಲ್ಲವನ್ನೂ ಪರಿಶೀಲನೆ ಮಾಡುತ್ತದೆ. ಜೊತೆಗೆ ಇದು ಸರ್ಕಾರಿ ಕಾರ್ಯಕ್ರಮವಲ್ಲ. ವಕೀಲರ ಕಾರ್ಯಕ್ರಮವಾದರೂ ಶಿವಕುಮಾರ್ ವೇದಿಕೆ ಹಂಚಿಕೊಳ್ಳಬಾರದು ಎಂಬ ಆಕ್ಷೇಪ ಕೇಳಿ ಬರುತ್ತಿದೆ.

ಈ ಬಗ್ಗೆ ಬಿಜೆಪಿಯ ಹಿರಿಯ ನಾಯಕ, ಮಾಜಿ ಕಾನೂನು ಸಚಿವ ಹಾಗೂ ಶಾಸಕ ಎಸ್. ಸುರೇಶ್ ಕುಮಾರ್ ಅವರು ಇದು ಶಿಷ್ಟಾಚಾರದ ಒಂದು ಪ್ರಶ್ನೆಯಾಗಿದೆ ಎಂದಿದ್ದಾರೆ.

ನಾನು ಕಾನೂನು ಸಚಿವರಾಗಿದ್ದಾಗ ನ್ಯಾಯಮೂರ್ತಿಗಳು ಭಾಗವಹಿಸುವ ವೇದಿಕೆ ಹಂಚಿಕೊಳ್ಳುವ ಮುನ್ನ ನನ್ನ ಮೇಲೆ ಯಾವುದಾದರೂ ಕ್ರಿಮಿನಲ್ ಪ್ರಕರಣಗಳಿವೆಯೇ? ಎಂದು ನನ್ನನ್ನೇ ಪ್ರಶ್ನಿಸಿದ್ದರು. ಶಿವಕುಮಾರ್ ಎದುರಿಸುತ್ತಿರುವ ಕೆಲವು ಕೇಸುಗಳು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮುಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ.

ಅಂತಹ ವ್ಯಕ್ತಿ ಸಮಾವೇಶದ ವೇದಿಕೆಯಲ್ಲಿ ನ್ಯಾಯಮೂರ್ತಿಗಳ ಜತೆ ಭಾಗವಹಿಸುವುದು ಸೂಕ್ತವೇ ಎಂದು ಪ್ರಶ್ನಿಸಿದ್ದಾರೆ.

ಈ ಬಗ್ಗೆ ವಕೀಲರ ಪರಿಷತ್ತೇ ಸ್ಪಷ್ಟನೆ ಕೊಡಬೇಕು. ಶಿಷ್ಟಾಚಾರ ಎಲ್ಲರಿಗೂ ಅನ್ವಯವಾಗಬೇಕಲ್ಲವೇ?

ನ್ಯಾಯಮೂರ್ತಿ ವೀರಪ್ಪ ಅವರು ನಿವೃತ್ತಿಯಾದ ಸಂದರ್ಭದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಬೀಳ್ಕೊಡಿಗೆ ಸಮಾರಂಭದಲ್ಲಿ ಶಿವಕುಮಾರ್ ಭಾಗವಹಿಸಿದ್ದಕ್ಕೆ ಅಂದೇ ಅಪಸ್ವರ ಎದ್ದಿತ್ತು.

# ನಿಟುವಳ್ಳಿಯಲ್ಲಿ ಇಂದು ಹೃದಯ, ಮಧುಮೇಹ, ತಪಾಸಣಾ ಶಿಬಿರ

ಉಚಿತ ಹೃದಯ, ರಕ್ತದೊತ್ತಡ, ಮಧುಮೇಹ ತಪಾಸಣಾ ಶಿಬಿರವನ್ನು ನಿಟುವಳ್ಳಿಯ ಆದರ್ಶ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಿಗ್ಗೆ 7 ರಿಂದ 9ರವರೆಗೆ ಏರ್ಪಡಿಸಲಾಗಿದೆ.

ಆರೈಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಪ್ರೀತಿ ಆರೈಕೆ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ನಡೆಯುವ ಶಿಬಿರದ ನೇತೃತ್ವವನ್ನು ಹಿರಿಯ ವೈದ್ಯ ಡಾ. ಟಿ.ಜಿ. ರವಿಕುಮಾರ್ ವಹಿಸಲಿದ್ದಾರೆ. ಸಂಪರ್ಕಿಸಿ : 91644 65550.

# ನಗರದಲ್ಲಿ ಇಂದು ಪ್ರತಿಭಾ ಪುರಸ್ಕಾರ

ದುಮ್ಮಿ ಹುಸೇನ್ ಸಾಬ್ ಚಾರಿಟೇಬಲ್ ಮತ್ತು ಶೈಕ್ಷಣಿಕ ಟ್ರಸ್ಟ್ ವತಿಯಿಂದ 2023ನೇ ಸಾಲಿನ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಮುಸ್ಲಿಂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಇಂದು ಬೆಳಿಗ್ಗೆ 10.30ಕ್ಕೆ ರೋಟರಿ ಬಾಲಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಯಾಗಿ ಪ್ರಾಧ್ಯಾಪಕ ಡಾ. ದಾದಾಪೀರ್ ನವಿಲೇಹಾಳ್, ಗೌರವ ಅತಿಥಿಯಾಗಿ ಸಾಮಾಜಿಕ ಕಾರ್ಯಕರ್ತ ಹೆಲ್ಪ್ ಲೈನ್ ಸುಭಾನ್ ಸಮಾರಂಭದಲ್ಲಿ ಪಾಲ್ಗೊಳ್ಳುವರು, ಟ್ರಸ್ಟ್‌ನ ಅಧ್ಯಕ್ಷ ಡಾ. ಅಬ್ದುಲ್ ಬುಡೇನ್ ದುಮ್ಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

# ನಾಗರಿಕ ಸಂಹಿತೆಯಿಂದ ದೇಶದ ವೈವಿಧ್ಯತೆಗೆ ಧಕ್ಕೆಯಾಗದು



**(1ನೇ ಪುಟದಿಂದ)** ಯಾವುದೇ ಕಾಯ್ದೆ ತಿದ್ದುಪಡಿಯ ವೇಳೆ ಭಿನ್ನಾಭಿಪ್ರಾಯ, ವಿರೋಧಗಳು ಬರುವುದು ಸಹಜ. ಆದ್ದರಿಂದ ಈ ಕಾನೂನಿನ ಬಗ್ಗೆಯೂ ದೊಡ್ಡ ಪ್ರಮಾಣದ ಬಗ್ಗೆ ಚರ್ಚೆಯಾಗಬೇಕೆಂಬುದು ನಮ್ಮ ಆಗ್ರಹವೂ ಆಗಿದೆ ಎಂದು ಹೇಳಿದರು. ದೇಶದ ಇತಿಹಾಸ ಗಮನಿಸಿದಾಗ ಸಾಮಾಜಿಕ ಬದಲಾವಣೆಯಲ್ಲಿ ವಕೀಲರು ಮುಂಚೂಣಿಯಲ್ಲಿದ್ದಾರೆ.

ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಸಂಪರ್ಕದಲ್ಲಿದ್ದು, ಅವರ ಸಂಕಷ್ಟಗಳನ್ನು ಅರಿತಿದ್ದಾರೆ. ಅವರ ನಾಡಿ ಮಿಡಿತ ಬಲ್ಲ ವಕೀಲರು ಜನರಲ್ಲಿ ಈ ಕಾನೂನು ಬಗ್ಗೆ ಜಾಗೃತಿ ಮೂಡಿಸಬೇಕು.

ಈ ಕಾನೂನು ಬಗ್ಗೆ ಜನರ ನಡುವೆ ಚರ್ಚೆಗಳಾಗಬೇಕು. ಕಾನೂನಿನಲ್ಲಿರುವ ಅಂಶಗಳು, ವಾಸ್ತವ ಸ್ಥಿತಿ ಬಗ್ಗೆ ಅರಿವು ಮೂಡಿಸಲು ವಕೀಲರ ಪಾತ್ರ ಹೆಚ್ಚು. ಇದು ಪಡೆಂಭೂತ ಅಲ್ಲ ಎಂದು ವಕೀಲರು ಹೇಳಬೇಕು. ಸಭೆಗಳನ್ನು ನಡೆಸಿ ಈ ಕಾನೂನಿನಲ್ಲಿರುವ ಉತ್ತಮ ಅಂಶಗಳನ್ನು ಬಿಂಬಿಸಬೇಕು. ದೇಶದ ವೈವಿಧ್ಯತೆಯನ್ನು ಉಳಿಸಿಕೊಂಡೇ ಏಕರೂಪದ ಕಲ್ಪನೆಯನ್ನು ಬೆಂಬಲಿಸಬೇಕು ಎಂದು ಕರೆ ನೀಡಿದರು.

ಗೋವಾದಲ್ಲಿ ಜಾರಿಯಾಗಿರುವ ಕಾನೂನಿನಲ್ಲಿ ಏಕರೂಪ ನಾಗರಿಕ ಸಂಹಿತೆಯ ಹಲವು ಅಂಶಗಳಿವೆ. ಬೇರೆಲ್ಲಾ ದೇಶಗಳಲ್ಲೂ ಒಂದೇ ರೀತಿಯ ಕಾನೂನು ಇದೆ. ಅಲ್ಲಿ ಎಲ್ಲರೂ ಸಹಬಾಳ್ವೆಯಿಂದ ಜೀವನ ಸಾಗಿಸುತ್ತಿದ್ದಾರಲ್ಲವೇ? ಎಂದು ಹೆಗಡೆ ಪ್ರಶ್ನಿಸಿದರು.

ವಿವಾಹ, ವಿಚ್ಛೇದನ, ಮಕ್ಕಳ ದತ್ತು ಸ್ವೀಕಾರ, ಆಸ್ತಿ ಪಾಲು ವಿಚಾರ ಹೀಗೆ ಸಾಮಾನ್ಯ ಕಾನೂನು ಹಾಗೂ ವೈಯಕ್ತಿಕ ಕಾನೂನಿನಲ್ಲಿ ವ್ಯತ್ಯಾಸವಿದ್ದು, ಇದರಿಂದ ಯಾರಿಗೂ ಯಾವ ರೀತಿಯಿಂದಲೂ ಅನ್ಯಾಯವಾಗಬಾರದು. ವಿವಾಹ ವಿಚ್ಛೇದನ ನೀಡಿದ ವ್ಯಕ್ತಿ ಪತ್ನಿಗೆ ಜೀವನಾಂಶ ನೀಡಬೇಕಾಗುತ್ತದೆ ಎಂದು ಅನ್ಯ ಧರ್ಮಕ್ಕೆ ಮತಾಂತರಗೊಂಡ ಉದಾಹರಣೆಗಳಿದ್ದು, ಈ ರೀತಿ ಕಾನೂನು ದುರುಪಯೋಗಗಳನ್ನು ತಡೆಯಲು ಏಕರೂಪ ನಾಗರಿಕ ಸಂಹಿತೆ ಜಾರಿಯಿಂದ ಸಾಧ್ಯ ಎಂದರು.

ಆರ್.ಎಲ್. ಕಾನೂನು ಕಾಲೇಜು ಪ್ರಾಂಶುಪಾಲ ಡಾ. ಜಿ.ಎಸ್. ಯತೀಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಾ, ನ್ಯಾಯಾಧೀಶರು ಧರ್ಮಾಧಾರಿತ, ಜಾತಿ, ಲಿಂಗ ಆಧಾರಿತ ತೀರ್ಪು ನೀಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕಿದೆ ಎಂದರು.

ಅಧಿವಕ್ತಾ ಪರಿಷತ್ ಜಿಲ್ಲಾಧ್ಯಕ್ಷರೂ, ಹಿರಿಯ ವಕೀಲರೂ ಆದ ಎಲ್.ದಯಾನಂದ ಅಧ್ಯಕ್ಷತೆ ವಹಿಸಿದ್ದರು. ದಾವಣಗೆರೆ ತಾಲ್ಲೂಕು ಅಧ್ಯಕ್ಷ ಡಿ. ಎನ್. ಬಸವರಾಜ್, ಹರಿಹರ ತಾಲ್ಲೂಕು ಅಧ್ಯಕ್ಷ ಮಂಜುನಾಥ ದೊಡ್ಡಮನಿ ಉಪಸ್ಥಿತರಿದ್ದರು. ವಕೀಲ ಹೆಚ್.ಶಿವಣ್ಣ ಸ್ವಾಗತಿಸಿದರು. ವೈ.ಜ್ಯೋತಿ ಪ್ರಾರ್ಥಿಸಿದರು. ಶ್ರೀಮತಿ ಲೋಹಿತ ನಿರೂಪಿಸಿದರು.

# ವೀಡಿಯೋಕಾನ್ ಸಾಲ : ಐಸಿಐಸಿಐಗೆ ಸಾವಿರ ಕೋಟಿ ರೂ. ನಷ್ಟ

**ಸಿ.ಬಿ.ಐ. ಆರೋಪ ಪಟ್ಟಿ ದಾಖಲು**

ಮುಂಬೈ, ಆ. 5 - ಐ.ಸಿ.ಐ.ಸಿ.ಐ. ಬ್ಯಾಂಕ್ ಮೂಲಕ ವೀಡಿಯೋಕಾನ್‌ಗೆ ನೀಡಲಾದ ಸಾಲದ ಕಾರಣದಿಂದಾಗಿ 1 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ನಿಷ್ಕ್ರಿಯ ಆಸ್ತಿ ಸೃಷ್ಟಿಯಾಗಿದೆ ಎಂದು ಸಿ.ಬಿ.ಐ. ದಾಖಲಿಸಿದ ಆರೋಪ ಪಟ್ಟಿಯಲ್ಲಿ ತಿಳಿಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಐ.ಸಿ.ಐ.ಸಿ.ಐ. ಬ್ಯಾಂಕ್ ಮಾಜಿ ಸಿಇಒ ಚಂದಾ ಕೊಚ್ಚರ್, ಅವರ ಪತಿ ದೀಪಕ್ ಕೊಚ್ಚರ್ ಹಾಗೂ ವೀಡಿಯೋಕಾನ್ ಸ್ಥಾಪಕ ವೇಣುಗೋಪಾಲ್ ಧೂತ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. 10 ಸಾವಿರ ಪುಟಗಳ ಆರೋಪ ಪಟ್ಟಿಯನ್ನು ಇತ್ತೀಚೆಗೆ ಸಿ.ಬಿ.ಐ. ವಿಶೇಷ ನ್ಯಾಯಾಲಯದ ಎದುರು ದಾಖಲಿಸಲಾಗಿದೆ. ಚಂದಾ ಕೊಚ್ಚರ್ ಅವರು 2009ರಲ್ಲಿ ಐ.ಸಿ.ಐ.ಸಿ.ಐ. ಬ್ಯಾಂಕ್ ಸಿಇಒ ಆದ ನಂತರ 1,875 ಕೋಟಿ ರೂ.ಗಳ ಸಾಲವನ್ನು ಮಂಜೂರು ಮಾಡಲಾಗಿತ್ತು. 2017ರಲ್ಲಿ ಈ ಸಾಲಗಳು ಎನ್.ಪಿ.ಎ. ಆಗಿ ಪರಿವರ್ತನೆಯಾಗಿದ್ದವು. ಒಟ್ಟು ಎನ್.ಪಿ.ಎ. ಮೊತ್ತ 1,033 ಕೋಟಿ ರೂ. ಆಗಿದೆ.

# ನೈಸ್ ಹಗರಣದ ಸಿಬಿಐ ತನಿಖೆಗೆ ಹೆಚ್ಡಿಕೆ ಒತ್ತಾಯ

ಬೆಂಗಳೂರು, ಆ.5 - ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್(ನೈಸ್) ಯೋಜನೆಯಲ್ಲಿ ನಡೆದಿರುವ ಕೋಟ್ಯಂತರ ರೂ. ಅವ್ಯವಹಾರವನ್ನು ಸಿಬಿಐ ತನಿಖೆಗೆ ವಹಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರಧಾನಿ ಅವರನ್ನು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೈಸ್ ಅವ್ಯ ವಹಾರದ ದಾಖಲೆಗಳ ಕಡತವನ್ನು ಪ್ರಧಾನಿ ಗೃಹ ಸಚಿವ ಅಮಿತ್ ಷಾ ಅವರಿಗೆ ಖುದ್ದು ಭೇಟಿ ಮಾಡಿ ನೀಡುತ್ತೇನೆ ಎಂದು ಹೇಳಿದರು. ಅವ್ಯವಹಾರವನ್ನು ಪ್ರಧಾನಿ ಗಮನಕ್ಕೆ ತರಲು ಇನ್ನೆರಡು ದಿನದಲ್ಲಿ ಪ್ರಧಾನಿ ಅವರ ಸಮಯ ಕೋರಲಾಗುವುದು. ಪ್ರಧಾನಿ ಭೇಟಿಯಾಗಿ ದಾಖಲೆ ಸಲ್ಲಿಸಿದ ಬಳಿಕ ದೆಹಲಿಯಲ್ಲೇ ನೈಸ್ ಕರ್ಮಕಾಂಡವನ್ನು ಮಾಧ್ಯಮಗಳ ಮುಂದೆ ಬಹಿರಂಗ ಪಡಿಸುತ್ತೇನೆ.

ವಿಧಾನಸಭೆಯಲ್ಲೇ ಈ ಕರ್ಮಕಾಂಡವನ್ನು ಬಯಲಿಗೆಳೆಯಲು ಮತ್ತೊಮ್ಮೆ ಪ್ರಯತ್ನಪಟ್ಟೇ ಆದರೆ, ಅಧಿಕಾರದಲ್ಲಿದ್ದವರು ಅವಕಾಶ ನೀಡಲಿಲ್ಲ. ರೈತರ ಮತ್ತು ರಾಜ್ಯದ ಹಿತ ದೃಷ್ಟಿಯಿಂದ ಪ್ರಧಾನಿ ಅವರ ಮೊರೆ ಹೋಗುತ್ತಿದ್ದೇನೆ. ಅವರಿಂದ ನ್ಯಾಯ ದೊರಕುವ ವಿಶ್ವಾಸವಿದೆ ಎಂದರು.

## ರಾಜನಹಳ್ಳಿಯಲ್ಲಿ ಸಭೆ

ಮಲೇಬೆನ್ನೂರು, ಆ.5- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಇದೇ ದಿನಾಂಕ 8ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮಠದ ಧರ್ಮದರ್ಶಿಗಳ ಮತ್ತು ಸಮಾಜದ ಮುಖಂಡರ ಸಭೆಯನ್ನು ಕರೆಯಲಾಗಿದೆ.

# ನಿಟ್ಟೂರು ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿ ಸುಧಾ ಬಾರಿಕರ, ಉಪಾಧ್ಯಕ್ಷರಾಗಿ ಕೊರವರ ಮಾರುತಿ



ಹರಪನಹಳ್ಳಿ, ಆ. 5 - ತಾಲ್ಲೂಕಿನ ನಿಟ್ಟೂರು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಸುಧಾ ಹಾಗೂ ಉಪಾಧ್ಯಕ್ಷರಾಗಿ ಕೊರವರ ಮಾರುತಿ ಶನಿವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಕೆ.ಆರ್. ಪ್ರಕಾಶ್ ತಿಳಿಸಿದರು.

ಗ್ರಾಮ ಪಂಚಾಯಿತಿ ಒಟ್ಟು 16 ಸದಸ್ಯರು ಹಾಜರಿದ್ದು, ಅಧ್ಯಕ್ಷ ಸ್ಥಾನಕ್ಕೆ ಸುಧಾ ಬಾರಿಕರ, ಪೂಜಾರ ಶಿವಕುಮಾರ ಸ್ಪರ್ಧಿಸಿದ್ದರು, ಉಪಾಧ್ಯಕ್ಷ ಸ್ಥಾನಕ್ಕೆ ಕೊರವರ ಮಾರುತಿ, ಚಲುವಾದಿ ನಾಗಮ್ಮ ಸ್ಪರ್ಧಿಸಿದ್ದರು.

16ಸದಸ್ಯರು ಚುನಾವಣೆಯಲ್ಲಿ ಮತ ಚಲಾಯಿಸಿದ್ದು. ಸುಧಾ ಬಾರಿಕರ ಅವರು 8 ಮತಗಳನ್ನು ಪಡೆದರೆ, ಪೂಜಾರ ಶಿವಕುಮಾರ ಅವರು 7 ಮತಗಳನ್ನು ಪಡೆದಿದ್ದು, ಒಂದು ಮತ ತಿರಸ್ಕೃತಗೊಂಡ ಹಿನ್ನೆಲೆಯಲ್ಲಿ 8 ಮತ ಪಡೆದ ಸುಧಾ ಬಾರಿಕರ ಅವರು ಅಧ್ಯಕ್ಷರಾಗಿ ಆಯ್ಕೆಯಾದರು.

ಉಪಾಧ್ಯಕ್ಷ ಸ್ಥಾನಕ್ಕೆ ತಲಾ 8 ಮತಗಳು ಬಿದ್ದ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳು ಸದಸ್ಯರ ಸಮ್ಮುಖದಲ್ಲಿ ಲಾಟರಿ ಪ್ರಕ್ರಿಯೆ ನಡೆಸಿದರು. ಈ ವೇಳೆ ಕೊರವರ ಮಾರುತಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಹೆಚ್.ಟಿ. ಅರುಣಕುಮಾರ, ಕೆ.ಎಚ್. ಕೊಟ್ರೇಶ, ಕೆ.ಡಿ.ಪ್ರಶಾಂತ, ಐ. ಜನಾರ್ದನ, ಎನ್. ಹನುಮಂತಪ್ಪ, ಎನ್. ಪರಶುರಾಮಪ್ಪ, ಕೆ. ಗೋದೆಪ್ಪ, ಆರ್. ಮಂಜುನಾಥ, ಜೆ. ಶಿವಾನಂದಪ್ಪ, ಎ.ಎಸ್. ಸೋಮಲಿಂಗಪ್ಪ, ಬಿ. ನಾಗರಾಜ, ಮೂಲಿಮನಿ ಹನುಮಂತಪ್ಪ, ಅನಿಲಕುಮಾರ, ಸೇರಿದಂತೆ ಇತರರು ಇದ್ದರು.

# ಚಿರಸ್ತಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಎಸ್. ಪರಶುರಾಮಪ್ಪ, ಉಪಾಧ್ಯಕ್ಷರಾಗಿ ಹಳ್ಳಿಕೇರಿ ಗೌರಮ್ಮ



ಹರಪನಹಳ್ಳಿ, ಆ. 5 - ತಾಲ್ಲೂಕಿನ ಚಿರಸ್ತಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಎಸ್. ಪರಶುರಾಮಪ್ಪ, ಉಪಾಧ್ಯಕ್ಷರಾಗಿ ಹಳ್ಳಿಕೇರಿ ಗೌರಮ್ಮ ಶನಿವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಟ್ಟು 14 ಜನ ಸದಸ್ಯರು ಪೈಕಿ 12 ಜನ ಸದಸ್ಯರು ಹಾಜರಿದ್ದು, ಈ ಪೈಕಿ ಅಧ್ಯಕ್ಷ ಸ್ಥಾನಕ್ಕೆ ಎಸ್. ಪರಶುರಾಮಪ್ಪ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಹಳ್ಳಿಕೇರಿ ಗೌರಮ್ಮ ಮಾತ್ರ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು ಎಂದು ಚುನಾವಣಾಧಿಕಾರಿ ಪ್ರಸನ್ನ ಘೋಷಿಸಿದರು.

ಈ ಸಂದರ್ಭದಲ್ಲಿ ವಕೀಲ ಟಿ.ಎಂ. ಶ್ರೀಧರ, ಪ್ರಭಾಕರ, ಹಾಲೇಶ್, ಮೌನೇಶ್, ಸತೀಶ, ಸುರೇಶ, ಕೆ. ಮಂಜುನಾಥ, ಲಕ್ಷ್ಮಣನಾಯ್ಕ, ಭಾರತಿ ಬಾಯಿ, ಮಹಾಂತೇಶನಾಯ್ಕ, ಶಿವಕುಮಾರ, ಅನಿಲ, ಸಿದ್ದಪ್ಪ, ಬಸವರಾಜ, ಭರಮಪ್ಪ, ಅಂಜಿನಪ್ಪ, ಗ್ರಾ.ಪಂ. ಪಿಡಿಓ, ಸಿಬ್ಬಂಧಿ ಹಾಗೂ ಇತರರು ಉಪಸ್ಥಿತರಿದ್ದರು.


॥ ಶ್ರೀ ಉಜ್ಜಯಿನಿ ಮರುಳಸಿದ್ದೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ದಾವಣಗೆರೆ ವಾಸಿಗಳಾದ
ಶ್ರೀಮತಿ ದೀಪಾ, ಶ್ರೀ ಗಿರೀಶ್ ಕಡ್ಲೆಬಾಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 03.08.2023ನೇ ಗುರುವಾರ ಬೆಳಗಿನ ಜಾವ 03-30 ಗಂಟೆಗೆ ನನ್ನ ಪೂಜ್ಯ ತಂದೆಯವರಾದ
**ಶ್ರೀಯುತ ಚಂದ್ರಶೇಖರಪ್ಪ ಕಡ್ಲೆಬಾಳು**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 07.08.2023ನೇ ಸೋಮವಾರ ಬೆಳಿಗ್ಗೆ 10.30ಕ್ಕೆ
ಷ॥ ಬ್ರ॥ ಡಾ॥ ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳ ಮಠ,
ಎಂ.ಸಿ.ಸಿ. 'ಬಿ' ಬ್ಲಾಕ್, ಟ್ಯಾಂಕ್ ಪಾರ್ಕ್ ಹತ್ತಿರ, ದಾವಣಗೆರೆ ಇಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು : ಶ್ರೀಮತಿ ದೀಪಾ, ಶ್ರೀ ಗಿರೀಶ್ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು. ಮೊ. : 94498 22230
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.



**ಕೃಷ್ಣಮೂರ್ತಿ ವಿ. ಅಂಬರ್‌ಕರ್ ನಿಧನ**



ದಾವಣಗೆರೆ ನಗರದ ಪಿ.ಬಿ. ರಸ್ತೆ, ರೇಣುಕಾ ಮಂದಿರದ ಎದುರಿನ ವಾಸಿ, ಹೆಸರಾಂತ ಜವಳಿ ವರ್ತಕರಾದ ಅಂಬರ್‌ಕರ್ ವೆಂಕಪ್ಪನವರ ತೃತೀಯ ಪುತ್ರರಾದ ಶ್ರೀ ಎ.ವಿ. ಕೃಷ್ಣಮೂರ್ತಿ ಅವರು ದಿನಾಂಕ 05-08-2023ರ ಶನಿವಾರ ಸಂಜೆ 6.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 06-08-2023ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಹರಿಹರ ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :
ಅಂಬರ್‌ಕರ್ ವೆಂಕಪ್ಪ ಪಂಪಂಣ ವಂಶಸ್ಥರು



**ಯಲ್ಲಪ್ಪ ತೇರದಾಳ್ ನಿಧನ**



ದಾವಣಗೆರೆ ಸಿಟಿ ಜಾಲಿನಗರ ವಾಸಿ, ಯಲ್ಲಪ್ಪ ತೇರದಾಳ್ (61) ಅವರು ದಿನಾಂಕ 05.08.2023ರ ಶನಿವಾರ ರಾತ್ರಿ 7.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 06.08.2023ರ ಭಾನುವಾರ ಮಧ್ಯಾಹ್ನ 1 ಕ್ಕೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಲಿದೆ.


# ಭರಮಸಾಗರದಲ್ಲಿಂದು ಉಪ ಅಂಚೆ ಕಚೇರಿ ನೂತನ ಕಟ್ಟಡ ಉದ್ಘಾಟನೆ

ಭರಮಸಾಗರದಲ್ಲಿ ನೂತನವಾಗಿ ನಿರ್ಮಿಸಿರುವ ಉಪ ಅಂಚೆ ಕಚೇರಿ ನೂತನ ಕಟ್ಟಡ ಉದ್ಘಾಟನಾ ಸಮಾರಂಭವು ಇಂದು ಬೆಳಗ್ಗೆ 11 ಗಂಟೆಗೆ ನೆರವೇರಲಿದೆ. ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ನೂತನ ಕಟ್ಟಡವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಎಂ ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ಕೆ. ಎಸ್. ನವೀನ್, ಅಂಚೆ ಇಲಾಖೆ ಮಾಸ್ಟರ್ ಜನರಲ್ ಕರ್ನಾಟಕ ವೃತ್ತ ಬೆಂಗಳೂರು ಎಸ್ ರಾಜೇಂದ್ರ ಕುಮಾರ್ , ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶ್ರೀಮತಿ ಮಂಜುಳಮ್ಮ ಕರಿಬಸಪ್ಪ ಆಗಮಿಸುವರು. ಚಿತ್ರದುರ್ಗ ಅಂಚೆ ಅಧೀಕ್ಷಕ ಓ. ವಿರೂಪಾಕ್ಷಪ್ಪ ಅಧ್ಯಕ್ಷತೆ ವಹಿಸುವರು. ಇದೇ ಸಂದರ್ಭದಲ್ಲಿ ನೂತನ ಅಂಚೆ ಇಲಾಖೆ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸ್ಥಳೀಯ ಅಂಚೆ ಪಾಲಕ ಜಿ. ಹೆಚ್. ಸುರೇಶ್ ತಿಳಿಸಿರುತ್ತಾರೆ.

# 1.39 ಲಕ್ಷ ಕೋಟಿ

(1ನೇ ಪುಟದಿಂದ)

ಬ್ರಾಡ್‌ಬ್ಯಾಂಡ್ ಸೌಲಭ್ಯ ಕಲ್ಪಿಸಲು 1,39,579 ಕೋಟಿ ರೂ.ಗಳ ಯೋಜನೆಗೆ ಒಪ್ಪಿಗೆ ನೀಡಲಾಗಿದೆ. ಬ್ರಾಡ್‌ಬ್ಯಾಂ ಡ್ ಸೌಲಭ್ಯದಿಂದ ಸ್ಥಳೀಯ ಉದ್ಯಮಿಗಳಿಗೆ ನೆರವಾಗಲಿದೆ. ಇದಕ್ಕೂ ಮುಂಚೆ 60 ಸಾವಿರ ಹಳ್ಳಿಗಳಲ್ಲಿ ನಡೆಸಲಾದ ಪ್ರಾಯೋಗಿಕ ಯೋಜನೆ ಯಲ್ಲಿ 3,800 ಸ್ಥಳೀಯ ಉದ್ಯಮಿಗಳು 3.51 ಲಕ್ಷ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಿದ್ದಾರೆ.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ವಾರ ಭವಿಷ್ಯ

**ದಿನಾಂಕ : 06.08.2023 ರಿಂದ 12.08.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ವ್ಯವಹಾರದಲ್ಲಿ ಕಂಡುಬರಲಿರುವ ಅಡಚಣೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವಿರಿ. ಮತ್ತು ಈ ನಿಟ್ಟಿನಲ್ಲಿ ಯಶಸ್ವಿಯಾಗುವಿರಿ. ಬಹು ಪ್ರಯತ್ನದಿಂದ ಅರಂಭಿಸಿದ ಹೊಸ ಯೋಜನೆಗಳು, ಲಾಭವನ್ನು ತರದಿದ್ದರೂ ನಷ್ಟವನ್ನಂತೂ ಖಂಡಿತಾ ಮಾಡುವುದಿಲ್ಲ. ಆರ್ಥಿಕ ಸ್ಥಿತಿಗತಿ ಕ್ರಮೇಣ ಸುಧಾರಿಸಲಿದೆ. ದಿನಸಿ ವ್ಯಾಪಾರಿಗಳಿಗೆ ಭರ್ಜರಿ ವಹಿವಾಟಿನಿಂದಾಗಿ ಲಾಭದಲ್ಲಿ ಹೆಚ್ಚಳವಾಗಲಿದೆ. ಅನಾರೋಗ್ಯ ಪೀಡಿತರಾದವರಿಗೆ, ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಲಿದೆ.ಭಾನು-ಮಂಗಳ-ಬುಧ-ಶುಭದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ವಿದ್ಯಾರ್ಥಿಗಳು ಅಧ್ಯಯನದ ವಿಷಯದಲ್ಲಿ ಒತ್ತಡಕ್ಕೆ ಒಳಗಾಗುವರು ಸಮಯ ಪ್ರಜ್ಞೆಯಿಂದ ಕೆಲಸಮಾಡಿದಲ್ಲಿ ಯಶಸ್ಸನ್ನು ಕಾಣುವಿರಿ. ಬೆಂಕಿ ಅಥವಾ ವಿದ್ಯುದುಪಕರಣ ಗಳೊಂದಿಗೆ ಕೆಲಸ ಮಾಡುವವರು ಬಹಳ ಎಚ್ಚರದಿಂದಿರುವುದು ಮೇಲು. ಮನೆಯಲ್ಲಿ ನಡೆಯಬೇಕಾಗಿರುವ ಶುಭ ಕಾರ್ಯಕ್ಕೆ ಭರದ ಸಿದ್ಧತೆ ನಡೆಯಲಿದೆ.ತೈಲೋತ್ಪನ್ನ ಮರಾಟಗಾರರಿಗೆ ಹೆಚ್ಚಿನ ಲಾಭಾಂಶ ದೊರೆಯಲಿದೆ. ಸರ್ಕಾರಿ ನೌಕರರು ಒತ್ತಡದ ವಾತಾವರಣದಲ್ಲಿ ಕೆಲಸ ಮಾಡಬೇಕಾದೀತು. ಮಕ್ಕಳ ಅರೋಗ್ಯದ ವಿಚಾರದಲ್ಲಿ ಎಚ್ಚರದಿಂದಿರಿ. ಗುರುಸೇವೆ ಮಾಡಿ. ಸೋಮ-ಗುರು-ಶುಕ್ರ-ಶುಭದಿನಗಳು.

**ಮಿಥುನ (3,4, ಆರಿವದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಪ್ರಥಮ ದರ್ಜೆ ಗುತ್ತಿಗೆದಾರರರಿಗೆ ಸರ್ಕಾರದಿಂದ ಬರಬೇಕಾಗಿರುವ ಬಾಕಿ ಹಣ ಕೈಸೇರಲಿದೆ ಸಾಧ್ಯವಾದಷ್ಟು ಸಾಲಗಳ ತೀರುವಳಿಗೆ ಯತ್ನಿಸುವುದು ಮೇಲು, ಮಕ್ಕಳ ಉದಾಸಿನ ಪ್ರವೃತ್ತಿಯಿಂದಾಗಿ ಸಾಧಾರಣ ಫಲಿತಾಂಶ ಬರಲಿದೆ. ಕ್ರೀಡಾ ಸಾಮಾಗ್ರಿಗಳು ಭರದಿಂದ ಮಾರಾಟವಾಗಲಿವೆ. ಬೇರೆಯವರ ಹಣಕ್ಕೆ ಜಾಮೀನಾಗಿದ್ದ ನೀವು ಆ ಸಿಕ್ಕಿನಿಂದ ರಾಜಿಪಂಚಾಯ್ತಿಯಿಂದಾಗಿ ಹೊರಬರುವಿರಿ ಇನ್ನು ಮುಂದೆ ಎಚ್ಚರದಿಂದಿರಿ, ಬಡ ವಿದ್ಯಾರ್ಥಿಗಳಿಗೆ ನೆರವಾಗುವಿರಿ. ಸೋಮ-ಬುಧ-ಗುರು-ಶುಭದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಬಹಳ ದಿನಗಳಿಂದ ಹಿರಿಯರಿಗೆ ಕಗ್ಗಂಟಾಗಿದ್ದ ಕೌಟುಂಬಿಕ ಸಮಸ್ಯೆಯೊಂದು ಇಷ್ಟರಲ್ಲೇ ಬಗೆಹರಿಯಲಿದೆ. ಇದರಿಂದ ಮನೆಯಲ್ಲಿ ನೆಮ್ಮದಿ ಮೂಡಲಿದೆ.ನಿರುದ್ಯೋಗಿ ಪದವೀಧರರಿಗೆ ಉತ್ತಮ ವೇತನದ ನೌಕರಿ ದೊರೆತು. ಬಂಧುಗಳ ಮಧ್ಯೆ ಘನತೆ ಗೌರವ ಹೆಚ್ಚಲಿದೆ. ಅವಿವಾಹಿತರಿಗೆ ಕಂಕಣಬಲ ಕೂಡಿಬರಲಿದ್ದು, ಶುಭಕಾರ್ಯ ನೆರವೇರಲಿದೆ.ಸ್ನೇಹಿತರ ವೈಯುಕ್ತಿಕ ವ್ಯವಹಾರಗಳಲ್ಲಿ ಮೂಗುತೂರಿಸದಿರುವುದು ಮೇಲು.ಆದಾಯದಲ್ಲಿ ಉತ್ತಮ ಏರಿಕೆ ಕಂಡುಬರುವುದರಿಂದ ಚಿಂತೆಬೇಡ, ಕುಲದೇವತಾರಾಧನೆ ಮಾಡಿ. ಭಾನು-ಸೋಮ-ಗುರು-ಶುಭದಿನಗಳು.

**ಸಿಂಹ ( ಮಘು, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಉತ್ತಮ ಕುಶಲ ತಜ್ಞರಿಗೆ ಹಲವಾರು ಕಡೆಗಳಿಂದ ಅವಕಾಶಗಳು ಬರಲಿದ್ದು, ಆಯ್ಕೆಯಲ್ಲಿ ಗೊಂದಲ ಕಂಡುಬರಲಿದೆ. ತುಸು ತಾಳ್ಮೆಯಿಂದ ಆಲೋಚಿಸಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ರಾಜಕಾರಣಿಗಳಿಗೆ ಪಕ್ಷದ ವರಿಷ್ಠರೊಂದಿಗೆ ಉತ್ತಮ ಸೌಹಾರ್ದತೆ ಇಟ್ಟುಕೊಳ್ಳುವುದು ಮೇಲು. ಏಕಕಾಲಕ್ಕೆ ಹಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೋಗಬೇಡಿ. ಇಲ್ಲವಾದಲ್ಲಿ ಭಾರೀ ನಷ್ಟವನ್ನು ಅನುಭವಿಸಬೇಕಾದೀತು, ವರಮಾನವನ್ನು ಹೆಚ್ಚಿಸಿಕೊಳ್ಳಲು ಹಲವು ಮಾರ್ಗವನ್ನು ಹುಡುಕುವಿರಿ. ಹಿರಿಯರನ್ನು ಗೌರವಿಸಿ. ಭಾನು-ಗುರು-ಶುಕ್ರ-ಶುಭದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಹೊಸದಾಗಿ ನೌಕರರಿಗೆ ಸೇರಿದವರಿಗೆ ನೌಕರಿಗೆ ಸೇರಿದ ಸ್ಥಳದಲ್ಲೇ ತರಬೇತಿಸಿಗಲಿದೆ.ಮತ್ತೊಬ್ಬರಲ್ಲಿ ತೋರುವ ಅಹಂಕಾರ ದರ್ಪಗಳಿಂದ ಏನೂ ಪ್ರಯೋಜನವಿಲ್ಲ.ಸರ್ಕಾರಿ ನೌಕರರು ತಮ್ಮ ಸಹೋದ್ಯೋಗಿಗಳೊಂದಿಗೆ ಸಹಕರಿಸದೇ ಹೋದಲ್ಲಿ ತೊಂದರೆಯನ್ನು ಅನುಭವಿಸಬೇಕಾದೀತು. ವೈಯುಕ್ತಿಕ ಬದುಕಿನಲ್ಲಿ ಬರಬಹುದಾದ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿ, ಆಸ್ತಿಗೆ ಸಂಬಂಧಿಸಿದ ಅಡಚಣೆಗಳನ್ನು ಮನೆಯ ಹಿರಿಯರು ಬಗೆಹರಿಸುವರು. ಕ್ರೀಡಾಪಟುಗಳಿಗೆ ವೃತ್ತಿಯಲ್ಲಿ ಸಮಸ್ಯೆಗಳು ತಲೆದೂರಲಿವೆ. ಮಂಗಳ-ಗುರು-ಶನಿ-ಶುಭದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಅಸ್ತಮಾ ಮೊದಲಾದ ಉಸಿರಾಟದ ಸಮಸ್ಯೆಗಳನ್ನು ಎದುರಿಸುತ್ತಿರುವವರು ತುಸು ಎಚ್ಚರದಿಂದಿರುವುದು ಮೇಲು. ಜಮೀನಿಗೆ ಸಂಬಂಧಿಸಿದ ನ್ಯಾಯಾಲಯ ವ್ಯಾಜ್ಯವು ತುಸು ತಡವಾದರೂ ನಿಮ್ಮ ಪರವಾಗಲಿದೆ. ನಿಮ್ಮ ತಪ್ಪು ನಿರ್ಧಾರಗಳಿಂದಾಗಿ ವ್ಯವಹಾರದಲ್ಲಿ ಪಾಲುದಾರರು ದೂರವಾಗುವ ಸಂಭವವಿದೆ. ಕೆಲವು ವಿಷಯಗಳಲ್ಲಿ ಆಪ್ತರ ಸಲಹೆಯಂತೆ ನಡೆದುಕೊಳ್ಳುವುದು ಮೇಲು. ಖರ್ಚು ವೆಚ್ಚಗಳು ಸಮಾನವಾಗಿರುವುದರಿಂದ ಉಳಿತಾಯದ ನಿರೀಕ್ಷೆಬೇಡ. ಅನಾವಶ್ಯಕವಾಗಿ ಪರಸ್ಥಳಗಳಿಗೆ ಪ್ರಯಾಣಿಸಬೇಡಿ. ವಿಷ್ಣು ಸಹಸ್ರ ನಾಮಪಠಿ. ಸೋಮ-ಶುಕ್ರ-ಶನಿ-ಶುಭದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನಿಮ್ಮ ಅಭಿಪ್ರಾಯವನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವಾಗ ಎಚ್ಚರದಿಂದಿರಿ.ವಿವೇಚನೆಯಿಂದ ಮಾಡಿದ ಕಾರ್ಯಗಳು ಫಲಪ್ರದವಾಗಲಿದೆ. ನಿವೃತ್ತಿಯಂಚಿನಲ್ಲಿರು ವವರು ತಮ್ಮ ಗಳಿಕೆಯನ್ನು ಹೂಡಿಕೆ ಮಾಡುವ ಮೊದಲು ಮತ್ತೊಮ್ಮೆ ಪರ್ಯಾಲೋಚಿಸು ವುದು ಉತ್ತಮ. ಪತ್ರಿಕಾರಂಗದಲ್ಲಿ ತೊಡಗಿಕೊಂಡವರಿಗೆ ಸರ್ಕಾರದಿಂದ ಹಲವು ಸೌಲಭ್ಯಗಳು ದೊರೆಯಲಿವೆ. ರಾಜಕಾರಣಿಗೆ ಉತ್ತಮ ದಿನಗಳಿದ್ದು, ತುಸು ತಾಳ್ಮೆಯಿಂದ ನಿರೀಕ್ಷೆಮಾಡುವುದು ಲೇಸು. ಗಳಿಕೆಯಲ್ಲಿ ಹೆಚ್ಚಿನ ಭಾಗವು ವೈದ್ಯಕೀಯ ಉಪಚಾರಗಳಿಗೆ ವ್ಯಯವಾಗಲಿದೆ. ಸೋಮ-ಮಂಗಳ-ಶುಕ್ರ-ಶುಭದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹಿಂದಿನ ಅನುಭವದಿಂದಾಗಿ ವಿದ್ಯಾರ್ಥಿಗಳು ಪಾಠ ಕಲಿಯಲಿದ್ದಾರೆ. ಮನೆಯ ಹಿರಿಯರಿಗೆ ಧಾರ್ಮಿಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ಮೂಡಲಿದೆ. ನೀರಿನ ದೋಷದಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬರಲಿದೆ. ಪ್ರವಾಸೀ ಉದ್ಯಮವನ್ನು ನಡೆಸುತ್ತಿರುವವರಿಗೆ ಬಿಡುವಿಲ್ಲದ ಕೆಲಸವಾಗಲಿದೆ.ಯುವಕರು ಉತ್ಸಾಹದಿಂದ ತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿಕೊಳ್ಳುವರು.ಮಹಿಳಾ ಉದ್ಯಮಿಗಳಿಗೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯಗಳು ದೊರೆಯಲಿವೆ. ಹಿರಿಯರ ಸಲಹೆ ಸೂಚನೆಗಳನ್ನು ಗೌರವಿಸುವುದನ್ನು ಕಲಿಯಿರಿ. ಗುರು-ಶುಕ್ರ-ಶನಿ-ಶುಭದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ನಿಮ್ಮ ಶ್ರಮ ಹಾಗು ಶ್ರದ್ಧೆಗೆ ತಕ್ಕಂತೆ ಉತ್ತಮ ಯಶಸ್ಸು ಸಿಗಲಿದೆ. ರಾಜಕಾರಣಿಗಳು ಸಾರ್ವಜನಿಕವಾಗಿ ಹೇಳಿಕೆ ಕೊಡುವಾಗ ಬಹಳ ಎಚ್ಚರದಿಂದಿರುವುದು ಮೇಲು. ಅಪರೂಪಕ್ಕೆ ಬಾಲ್ಯ ಸ್ನೇಹಿತರ ಭೇಟಿಯಾಗಲಿದ್ದು, ಕಳೆದುಹೋದ ದಿನಗಳನ್ನು ಮೆಲುಕುಹಾಕುವಿರಿ. ಕಟ್ಟಡ ನಿರ್ಮಾಣ ನೌಕರರಿಗೆ ಬಿಡುವಿಲ್ಲದ ಕೆಲಸದಿಂದಾಗಿ ಸಂಪಾದನೆ ಹೆಚ್ಚಲಿದೆ. ಬಣ್ಣದ ಲೋಕವನ್ನು ಪ್ರವೇಶಿಸುವ ಮೊದಲು ತಮ್ಮ ಸಾಮರ್ಥ್ಯದ ಅರಿವಿರುವುದು ಮೇಲು. ವಾಹನವನ್ನು ಚಲಿಸುವಾಗ ಎಚ್ಚರದಿಂದಿರಿ. ಗುರು ಸೇವೆಮಾಡಿ. ಬುಧ-ಗುರು-ಶನಿ-ಶುಭದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಮನೆತನದ ಕೀರ್ತಿಗೋಸ್ಕರ ಶ್ರಮಪಡುವ ನಿಮಗೆ ಹಿರಿಯರಿಂದ ಮೆಚ್ಚುಗೆ ಮಾತನ್ನು ಕೇಳುವಿರಿ.ವ್ಯಾಪಾರವ್ಯವಹಾರಗಳಲ್ಲಿ ಮಾತನಾಡುವಾಗ ಗಾಂಭೀರ್ಯವನ್ನು ಕಾಪಡಿಕೊಳ್ಳುವುದು ಉತ್ತಮ.ಯುವಕರು ತಮ್ಮ ಬಾಳಸಂಗಾತಿಯನ್ನು ಆರಿಸುವ ವಿಚಾರದಲ್ಲಿ ಕಟ್ಟುನಿಟ್ಟಾಗಿರುವುದು ಮೇಲು. ಹಿರಿಯಮೇಲಾಧಿಕಾರಿಗಳೊಂದಿಗೆ ಸೌಹರ್ದತೆ ಬೆಳೆಯಲಿದೆ. ವಿದೇಶದಲ್ಲಿ ಅಧ್ಯಯನವನ್ನು ಮಾಡಬೇಕೆಂಬುವವರಿಗೆ ಸಮಾಜದಿಂದ ಹಾಗು ಸಾರ್ವಜನಿಕವಾಗಿ ಉತ್ತಮ ಬೆಂಬಲದೊರೆಯಲಿದೆ.ಪುಣ್ಯಕ್ಷೇತ್ರ ದರ್ಶನ ಯೋಗವಿದೆ. ಮಂಗಳ-ಶುಕ್ರ-ಶನಿ-ಶುಭದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಒಪ್ಪಿಕೊಂಡ ಜವಾಬ್ದಾರಿಯನ್ನು ಬಹಳ ಪ್ರಾಮಾಣಿಕವಾಗಿ ಪ್ರಯತ್ನಿಸುವಿರಿ. ಆಸ್ತಿ ವಿಭಾಗಕ್ಕೆ ಸಂಬಂಧಿಸಿದಂತೆ ಬರಲಿವ ಕೊಜಲುಗಳನ್ನು ಸಮಾಧಾನದಿಂದ ಬಗೆಹರಿಸಲು ಹೆಣಗಾಡುವರು. ಹೈನುಗಾರಿಕೆ ಸಾಧಾರಣ ಎನ್ನಬಹುದಾದ ಲಾಭವನ್ನು ತರಲಿದೆ.ತರಕಾರಿ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಕೈಮೇಲಾಗಲಿದೆ. ರಫ್ತು ಉದ್ಯಮಿಕ್ಕಿದ್ದ ತಾಂತ್ರಿಕ ಅಡಚಣೆಗಳು ದೂರವಾಗಲಿದೆ. ಕೈಗಾರಿಕೋದ್ಯಮಿಗಳು ತಮ್ಮ ನೌಕರರ ಸಮಸ್ಯೆಗಳನ್ನು ಕುಳಿತು ಮಾತುಕತೆ ಮುಖಾಂತರ ಬಗೆಹರಿಸಿಕೊಳ್ಳುವುದು ಮೇಲು. ಸೋಮ-ಗುರು-ಶನಿ-ಶುಭದಿನಗಳು.

# ಮಕ್ಕಳಿಗೆ ದಂಡನೆ ಬೇಡ, ಪೋಷಕರ ಮಾದರಿ ಮಕ್ಕಳಿಗೆ ಮೌಲ್ಯ

**ಜೈನ್ ಪಬ್ಲಿಕ್ ಸ್ಕೂಲ್‌ನಲ್ಲಿ ನಡೆದ 'ಮಕ್ಕಳ ಪಾಲನ ಪೋಷಕರ ಕಲೆ' ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಗುರುರಾಜ ಕರ್ಜಗಿ**

ದಾವಣಗೆರೆ, ಆ. 5 - ಮಕ್ಕಳು ನಾವು ಹೇಳಿದ ಹಾಗೆ ಕೇಳುವುದಿಲ್ಲ. ನಮ್ಮ ವರ್ತನೆಯನ್ನು ನೋಡಿ ಕಲಿಯುತ್ತವೆ. ಹೀಗಾಗಿ ಮಕ್ಕಳಿಗೆ ಕಲಿಸಬೇಕು ಎಂದುಕೊಳ್ಳುವ ಒಳ್ಳೆಯ ಗುಣಗಳನ್ನು ಪೋಷಕರೇ ಮೊದಲು ಪಾಲಿಸಬೇಕು ಎಂದು ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಹೇಳಿದರು.

ನಗರದ ಜೈನ್ ಪಬ್ಲಿಕ್ ಸ್ಕೂಲ್‌ನಲ್ಲಿ ಇಂದು ಆಯೋಜಿಸಲಾಗಿದ್ದ 'ಮಕ್ಕಳ ಪಾಲನ ಪೋಷಕರ ಕಲೆ' ವಿಷಯದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪಾಲಕರು ತಮ್ಮ ಹತ್ತಾರು ಕೆಲಸಗಳ ನಡುವೆ ಮಕ್ಕಳ ಮೇಲೆ ನಿಗಾ ವಹಿಸುತ್ತಾರೆ. ಆದರೆ, ಮಕ್ಕಳಿಗೆ ಪಾಲಕರನ್ನು ನೋಡುವುದೇ ಏಕೈಕ ಕೆಲಸವಾಗಿರುತ್ತದೆ. ಹೀಗಾಗಿ ಪೋಷಕರು ಇಡುವ ತಪ್ಪು ಹೆಜ್ಜೆಗಳು ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುತ್ತವೆ ಎಂದು ಎಚ್ಚರಿಸಿದರು.

ಪೋಷಕರು ತಾವೇ ಟಿವಿ - ಮೊಬೈಲ್ ಮುಂದೆ ಕುಳಿತು, ಮಕ್ಕಳಿಗೆ ಓದಿ ಎಂದು ಹೇಳುವುದರಿಂದ ಪ್ರಯೋಜನವಾಗುವುದಿಲ್ಲ. ಪೋಷಕರೇ ಟಿವಿ ಹಾಗೂ ಮೊಬೈಲ್ ಬಿಡಬೇಕು. ಮಕ್ಕಳ ಜೊತೆ ಹೆಚ್ಚು ಒಡನಾಟ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮಕ್ಕಳು ಮಾಡುವ ತಪ್ಪಿಗಾಗಿ ದೈಹಿಕ ದಂಡನೆ ವಿಧಿಸುವುದರಲ್ಲಿ ಯಾವುದೇ ಅರ್ಥವಿಲ್ಲ. ತಪ್ಪು ಮಾಡುವುದು ಮನಸ್ಸೇ ಹೊರತು ದೇಹ ಅಲ್ಲ. ಮಕ್ಕಳ ಮನಸ್ಸನ್ನು ಅರಿತು, ಅವರ ಬೆಳವಣಿಗೆಗೆ ಸೂಕ್ತ ವಾತಾವರಣ ಕಲ್ಪಿಸಿದಾಗ ಅವರ ಬೆಳವಣಿಗೆ ಸೂಕ್ತ ರೀತಿಯಲ್ಲಿ ಸಾಗುತ್ತದೆ.



ಆಗ ದಂಡ ವಿಧಿಸುವ ಅಗತ್ಯವೇ ಬರುವುದಿಲ್ಲ ಎಂದು ಕರ್ಜಗಿ ಹೇಳಿದರು.

ಆಧುನಿಕ ಕಾಲದ ಸಂಪರ್ಕ ಮಾಧ್ಯಮಗಳು ಮನೆಯಲ್ಲಿ ಸಂಬಂಧ ಹಾಗೂ ಸಂಪರ್ಕ ಎರಡನ್ನೂ ಶಿಥಿಲಗೊಳಿಸುತ್ತಿವೆ. ಹೀಗಾಗಿ, ಮಕ್ಕಳು ಹಾಗೂ ಕುಟುಂಬದ ಜೊತೆ ಹರಟೆ ಹೊಡೆಯಲಿಕ್ಕಾಗಿಯೇ ಪ್ರತಿದಿನ ಒಂದಿಷ್ಟು ಸಮಯ ಮೀಸಲಿಡಬೇಕು. ಈ ರೀತಿ ಜೊತೆಯಾಗಿ ಸಮಯ ಕಳೆಯುವುದರಿಂದ ಮನೆಯಲ್ಲಿ ಸಂಬಂಧಗಳು ಗಟ್ಟಿ ಆಗುತ್ತವೆ ಎಂದವರು ತಿಳಿಸಿದರು.

ಮಕ್ಕಳು ಹೇಳುವುದನ್ನು ಕೇಳಿಸಿಕೊಳ್ಳುವುದು ಬಹಳ ಮುಖ್ಯ. ಯಾವುದೇ ಕೆಲಸದಲ್ಲಿ ಇಲ್ಲವೇ ಮೊಬೈಲ್ ನೋಡುತ್ತಾ ಮಕ್ಕಳ ಮಾತುಗಳನ್ನು ಆಲಿಸಬೇಡಿ. ತದೇಕಚಿತ್ತದಿಂದ ಅವರ ಮಾತುಗಳನ್ನು ಕೇಳಿದಾಗ ಮಕ್ಕಳ ಮನಸ್ಸಿಗೆ ಸಂತೋಷವಾಗುತ್ತದೆ. ಮಕ್ಕಳ ಭಾವನೆಗಳನ್ನು ತಿಳಿಯಲು ಪೋಷಕರಿಗೆ ಸಾಧ್ಯವಾಗುತ್ತದೆ ಎಂದರು.

ಮಕ್ಕಳ ಬಗ್ಗೆ ಅತಿಯಾದ ಕಾಳಜಿ, ಉಪೇಕ್ಷೆ ಇಲ್ಲವೇ ಅತಿ ಶಿಸ್ತು ಒಳ್ಳೆಯದಲ್ಲ. ಆಯಾ ಸಂದರ್ಭಕ್ಕೆ ಅನುಗುಣವಾಗಿ ಮಕ್ಕಳ ಜೊತೆ ವ್ಯವಹರಿಸಬೇಕು. ಅತಿಯಾದ ಶಿಸ್ತು ಇಲ್ಲವೇ ಅತಿಯಾದ ಉಡಾಫೆ ಎರಡೂ ಮಕ್ಕಳಿಗೆ ಮಾರಕ ಎಂದು ಕರ್ಜಗಿ ಹೇಳಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಜೈನ್ ಪಬ್ಲಿಕ್ ಸ್ಕೂಲ್‌ನ ಪ್ರಾಂಶುಪಾಲ ಎಸ್. ನಟರಾಜ್, ಜೈನ್ ವಸತಿ ಶಾಲೆಯ ಪ್ರಾಂಶುಪಾಲ ಅಚಲಾನಂದ ಜೈನ್, ಜೈನ್ ಪದವಿ ಕಾಲೇಜಿನ ಪ್ರಾಂಶುಪಾಲ ಜಿ.ಎಸ್. ಮಧು, ಕಾರ್ಯಕ್ರಮದ ಸಂಚಾಲಕಿ ಕೆ. ಯಶೋಧರ ಉಪಸ್ಥಿತರಿದ್ದರು.

ಜಿ.ಎಸ್. ಪ್ರೇರಣ ಪ್ರಾರ್ಥಿಸಿದರು. ಇ. ನಂದ ಸ್ವಾಗತಿಸಿದರೆ, ದೀಪಾ ಕುಮಾರಿ ವಂದಿಸಿದರು.

## ಪೋಷಕರಿಗೆ ಕಿವಿಮಾತು

- ✦ ಮಕ್ಕಳ ಜೊತೆ ಸಂವಹನ ಉತ್ತಮವಾಗಿರಲಿ. ಪ್ರತಿದಿನ ಸ್ವಲ್ಪ ಸಮಯವನ್ನು ಕುಟುಂಬದ ಜೊತೆ ಹರಟೆಗಾಗಿ ಮೀಸಲಿಡಿ.
- ✦ ಮಕ್ಕಳ ಸಣ್ಣ ವಿಷಯಗಳನ್ನೂ ಗಮನಿಸಿ, ಆದರೆ ಕಿರಿಕಿರಿ ಆಗುವ ರೀತಿ ತಿದ್ದಲು ಹೋಗಬೇಡಿ.
- ✦ ಮಕ್ಕಳ ಎದುರು ಪೋಷಕರು ತಮ್ಮ ಭಿನ್ನಾಭಿಪ್ರಾಯ ತೋರಿಸಬಾರದು. ಪರಸ್ಪರ ಚರ್ಚಿಸಿ, ಮಗುವಿನ ಎದುರು ಒಮ್ಮತ ತೋರಿಸಬೇಕು.
- ✦ ಮಕ್ಕಳು ಏನನ್ನಾದರೂ ಹೇಳಲು ಬಯಸಿದರೆ ಗಮನವಿಟ್ಟು ಕೇಳಿ. ಟಿವಿ ಇಲ್ಲವೇ ಮೊಬೈಲ್ ನೋಡುತ್ತಾ ಮಕ್ಕಳ ಮಾತು ಕೇಳಬಾರದು.
- ✦ ಚಿಕ್ಕ ಮಕ್ಕಳಿಗೆ ಕೋಪ, ಸಂತೋಷ, ದುಃಖ ಇತ್ಯಾದಿ ಭಾವನೆಗಳ ಬಗ್ಗೆ ಗೊತ್ತಿರುವುದಿಲ್ಲ. ಚಿಕ್ಕ ಮಕ್ಕಳು ಭಾವನೆಗಳನ್ನು ಹೊರ ಹಾಕಿದಾಗ ಟೀಕಿಸದೇ, ಭಾವನೆಗಳನ್ನು ಅರ್ಥ ಮಾಡಿಸಿಕೊಡಿ.
- ✦ ಮಕ್ಕಳಿಗೆ ಮೌಲ್ಯಗಳನ್ನು ನೇರವಾಗಿ ಕಲಿಸುವುದು ಉಪಯುಕ್ತವಲ್ಲ. ಮಕ್ಕಳಿಗೆ ಕಲಿಸುವ ಗುಣಗಳನ್ನು ಪೋಷಕರು ತಾವೇ ರೂಢಿಸಿಕೊಳ್ಳಬೇಕು.
- ✦ ಮಕ್ಕಳನ್ನು ಬೇರೆಯವರ ಜೊತೆ ಹೋಲಿಕೆ ಮಾಡಬೇಡಿ.
- ✦ ಮಕ್ಕಳು ನಿಮ್ಮ ಸ್ಥಾನಮಾನದ ಸಂಕೇತವೆಂದು ಭಾವಿಸಬೇಡಿ.
- ✦ ಮಕ್ಕಳ ಬಗ್ಗೆ ಅತಿಯಾದ ಕಾಳಜಿ ತೋರಬಾರದು ಹಾಗೂ ಅತಿಯಾದ ಕೊಡುಗೆಗಳನ್ನು ಕೊಡಬಾರದು.
- ✦ ಅತಿಶಿಸ್ತು ಹಾಗೂ ಉಪೇಕ್ಷೆ ಎರಡೂ ಮಕ್ಕಳಿಗೆ ಹಾನಿ ತರುತ್ತದೆ.

# ರೈತರ ಹಿತಕಾಯಲು ಕೇಂದ್ರ ಸರ್ಕಾರ ಬದ್ಧ: ಸಿದ್ದೇಶ್ವರ



**(1ನೇ ಪುಟದಿಂದ)** ನೇ ಸಾಲಿಗೆ ಈಗಾಗಲೇ 51 ಸಾವಿರ ರೈತರು ನೊಂದಣಿ ಮಾಡಿಸಿಕೊಂಡಿದ್ದಾರೆ, ಇದು ಜಿಲ್ಲೆಯಲ್ಲಿ ದಾಖಲೆಯ ನೊಂದಣಿಯಾಗಿದೆ. ಈ ವಿಚಾರವಾಗಿ ಜಂಟಿ ಕೃಷಿ ನಿರ್ದೇಶಕರಿಗೆ ಹಾಗೂ ಅವರ ತಂಡಕ್ಕೆ ನಾನು ಅಭಿನಂದಿಸುತ್ತೇನೆ ಎಂದರು.

ತೆಂಗು ಬೆಳೆಗಾರರ ಹಿತ ಕಾಪಾಡಲು ನಾನು ಕೇಂದ್ರ ಸರ್ಕಾರದ ಗಮನ ಸೆಳೆಯುವ ಕೆಲಸ ಮಾಡುತ್ತೇನೆ.

ತೆಂಗಿಗೆ ಸೂಕ್ತ ಬೆಂಬಲ ಬೆಲೆ ನಿಗದಿ ಮಾಡುವ ವಿಚಾರವಾಗಿ ಲೋಕಸ ಭೆಯಲ್ಲಿ ಮಾತನಾಡುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ, ದಾವಣಗೆರೆ ತಾಲ್ಲೂಕು ಕಾಡಜ್ಜಿ ಗ್ರಾಮದವರು ಸಮುದಾಯ ಭವನ ನಿರ್ಮಾಣಕ್ಕೆ ಅನುದಾನಕ್ಕೆ ಮನವಿ ಸಲ್ಲಿಸಿದರು. ಹರಪನಹಳ್ಳಿ ತಾಲ್ಲೂಕಿನ ಮೈದೂರು ಹಾಗೂ ನಂದಿಬೇವೂರು ತಾಂಡ, ಕಣಿವೇಹಳ್ಳಿ ಗ್ರಾಮಸ್ಥರು ಇದೇ ಸಂದರ್ಭದಲ್ಲಿ ವಿವಿಧ ವಿಷಯಗಳಿಗಾಗಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ದೂಡಾ ಮಾಜಿ ಅಧ್ಯಕ್ಷರಾದ ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಮುಖಂಡರಾದ ಮಹಾಬಲೇಶ್ವರ ಗೌಡ್ರು, ರೈತ ಮುಖಂಡ ಸತೀಶ್ ಕೊಳೇನಹಳ್ಳಿ ಉಪಸ್ಥಿತರಿದ್ದರು.

# ಗ್ಯಾರಂಟಿ: ಅಭಿವೃದ್ಧಿಗೆ ಹಿನ್ನಡೆಯಾಗದು

**(1ನೇ ಪುಟದಿಂದ)** ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ. ಇದರ ಬಗ್ಗೆ ಸಂಶಯ ಬೇಡ ಎಂದಿದ್ದಾರೆ. ಗ್ಯಾರಂಟಿಗಳನ್ನು ನೀಡುವುದರಿಂದ ರಾಜ್ಯದ ಬೊಕ್ಕಸ ಬರಿದಾಗುತ್ತದೆ ಎಂದು ನರೇಂದ್ರ ಮೋದಿ ಹೇಳಿರುವ ಹೇಳಿಕೆ ಅಪ್ಪಟ್ಟ ಸುಳ್ಳು. ಇದನ್ನು ನಂಬಬೇಡಿ. ಈಗಾಗಲೇ ಮೂರು ಗ್ಯಾರಂಟಿ ಅನುಷ್ಠಾನಗೊಂಡು ಅರ್ಹ ಫಲಾನುಭವಿಗಳ ಕೈ ತಲುಪುತ್ತಿವೆ.

ಗೃಹಲಕ್ಷ್ಮಿ ಯೋಜನೆಗೆ ಆಗಸ್ಟ್ 24 ರಂದು ಚಾಲನೆ ನೀಡಲಿದ್ದೇವೆ. ರಾಜ್ಯದ 1.28 ಕೋಟಿ ಕುಟುಂಬಗಳಿಗೆ 2000 ರೂ. ಗಳನ್ನು ಈ ಯೋಜನೆಯಡಿ ನೀಡಲಾಗುವುದು. ನಾವು ಜನರ ಕೈಗೆ ದುಡ್ಡು ನೀಡುತ್ತಿದ್ದೇವೆ. ಜನರಲ್ಲಿ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ತನ್ಮೂಲಕ ರಾಜ್ಯದ ಜಿಡಿಪಿ, ಆರ್ಥಿಕ ಚಟುವಟಿಕೆ ಜಾಸ್ತಿಯಾಗುತ್ತದೆ. ಐದು ಗ್ಯಾರಂಟಿಗಳಿಂದ ಒಬ್ಬರಿಗೆ 4 ರಿಂದ 5 ಸಾವಿರ ರೂ. ದೊರೆಯಲಿದ್ದು, ಈ ರೀತಿ ವಾರ್ಷಿಕವಾಗಿ 48 ರಿಂದ 60 ಸಾವಿರ ರೂ. ಜನರಿಗೆ ಲಭಿಸಲಿದೆ ಎಂದು ತಿಳಿಸಿದರು.

ಯೋಜನೆಗಳ ಅನುಷ್ಠಾನದ ಜೊತೆಗೆ ರಾಜ್ಯವನ್ನು ಸರ್ವತೋಮುಖ ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇವೆ. ನಾವು ನೀಡಿದ ಭರವಸೆಯಂತೆ 200 ಯುನಿಟ್ ಬಳಕೆ ಮಾಡುವ 2.14 ಕೋಟಿ ಕುಟುಂಬಗಳಿಗೆ ಶೂನ್ಯ ವಿದ್ಯುತ್ ಬಿಲ್ ತಲುಪಲಿದೆ. ಯಾರು ನೋಂದಣಿ ಮಾಡುತ್ತಾರೋ ಅವರೆಲ್ಲರಿಗೂ ಜುಲೈ ಒಂದರಿಂದಲೇ ಉಚಿತ ವಿದ್ಯುತ್ ದೊರೆಯುತ್ತಿದೆ ಎಂದು ಹೇಳಿದರು.

ರಾಜ್ಯ ಸರ್ಕಾರದ ಯೋಜನೆಗಳು ಬಿಜೆಪಿ ಹಾಗೂ ಪ್ರಧಾನಿ ಅವರಿಗೆ ನಡುಕ ಉಂಟು ಮಾಡಿದೆ. ವಿಧಾನಸಭೆ ಚುನಾಣೆ ರೀತಿಯ ಫಲಿತಾಂಶವೇ ಲೋಕಸಭೆ ಚುನಾವಣೆಯಲ್ಲೂ ಮರುಕಳಿಸಲಿದೆ ಎಂಬ ಭಯ ಬಿಜೆಪಿ ಅವರನ್ನು ಕಾಡುತ್ತಿದೆ. ಬಡವರ ವಿರೋಧಿ ಬಿಜೆಪಿಯನ್ನು ಮುಂದಿನ ಲೋಕಸಭಾ ಚುನಾವಣೆಯಲ್ಲೂ ಜನ ತಿರಸ್ಕರಿಸಿ, ದೆಹಲಿಯಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ತರಲಿದ್ದಾರೆ ಎಂದರು.

# ಮಾಜಿ ಪ್ರಧಾನಿ ಖಾನ್‌ಗೆ 3 ವರ್ಷ ಜೈಲು

**(1ನೇ ಪುಟದಿಂದ)** ನ್ಯಾಯಾಲಯದ ಆದೇಶದಲ್ಲಿ ತಿಳಿಸಲಾಗಿದೆ.

ಪಾಕಿಸ್ತಾನದ ಸಂವಿಧಾನಿಕ ಹುದ್ದೆಯಲ್ಲಿರುವವರಿಗೆ ದೊರೆಯುವ ಕೊಡುಗೆಗಳನ್ನು ತೋಶಖಾನಾ ಎಂಬಲ್ಲಿ ಇರಿಸಲಾಗುತ್ತದೆ. ಈ ಕೊಡುಗೆಗಳನ್ನು ಸರ್ಕಾರಕ್ಕೆ ಬಿಟ್ಟು ಹೋಗಬೇಕಾಗುತ್ತದೆ. ಒಂದು ವೇಳೆ ಕೊಡುಗೆಗಳು ಬೇಕು ಎನ್ನುವುದಾದರೆ, ಹಣ ಪಾವತಿಸಬೇಕಾಗುತ್ತದೆ. ಈ ವಿಷಯದಲ್ಲಿ ಖಾನ್ ವಂಚಿಸಿದ್ದಾರೆ ಎಂದು ಆರೋಪಿಸಲಾಗಿತ್ತು.

ನ್ಯಾಯಾಲಯದ ಆದೇಶದ ನಂತರ ಖಾನ್‌ರನ್ನು ಲಾಹೋರ್‌ನಲ್ಲಿರುವ ಅವರ ನಿವಾಸದಲ್ಲಿ ಬಂಧಿಸಿ ಇಸ್ಲಾಮಾಬಾದ್‌ಗೆ ತರಲಾಗಿದೆ. ಖಾನ್ ವಿರುದ್ಧದ ಪ್ರಕರಣ ರಾಜಕೀಯ ದ್ವೇಷದ್ದು ಎಂದು ಅವರ ನಿಕಟವರ್ತಿ ಹಾಗೂ ಮಾಜಿ ಸಚಿವ ಷಾ ಮೆಹಮೂದ್ ಕುರೇಶಿ ಆರೋಪಿಸಿದ್ದಾರೆ. ತೀರ್ಪಿಗೆ ಸಂಬಂಧಿಸಿದಂತೆ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿಗಳನ್ನು ಬಂಧಿಸಿದ ಘಟನೆ ಇದೇ ಮೊದಲ ಬಾರಿಯೇನೂ ನಡೆದಿಲ್ಲ. ಈ ಹಿಂದೆ 1962ರಲ್ಲಿ ಪಾಕಿಸ್ತಾನದ ಐದನೇ ಪ್ರಧಾನ ಮಂತ್ರಿಯಾಗಿದ್ದ ಹುಸೇನ್ ಶಹೀದ್ ಸುಹ್ರಾವರ್ದಿ ಅವರನ್ನು ಬಂಧಿಸಲಾಗಿತ್ತು. 1974ರಲ್ಲಿ ಜುಲ್ಫಿಕರ್ ಅಲಿ ಭುಟ್ಟೋ ಬಂಧಿಸಿ, 1979ರಲ್ಲಿ ನೇಣಿಗೆ ಹಾಕಲಾಗಿತ್ತು. ಬೆನಜೀರ್ ಭುಟ್ಟೋ ಅವರನ್ನು 1985ರಲ್ಲಿ ಮೊದಲು ಬಂಧಿಸಲಾಗಿತ್ತು. ನಂತರ ಹಲವು ಬಾರಿ ಅವರನ್ನು ಬಂಧಿಸಲಾಗಿತ್ತು. 1999ರಲ್ಲಿ ನವಾಜ್ ಷರೀಫ್ ಬಂಧನಕ್ಕೊಳಗಾಗಿ, 10 ವರ್ಷ ಅವರು ದೇಶಭ್ರಷ್ಟಗೊಂಡಿದ್ದರು.

# ತೆರಿಗೆ ಕಾನೂನು ಸರಳವಾದಷ್ಟು ಜನರಿಗೆ ಅನುಕೂಲ : ಬೊಮ್ಮಾಯಿ

ಬೆಂಗಳೂರು, ಆ.5 - ತೆರಿಗೆ ಕಾನೂನುಗಳು ಸರಳವಾದಷ್ಟು ಸಾಮಾನ್ಯರಿಗೆ ಅನುಕೂಲವಾಗಲಿದೆ. ಹೆಚ್ಚು ತೆರಿಗೆ ಸಂಗ್ರಹವಾದಷ್ಟು ದೇಶ ಅಭಿವೃದ್ಧಿ ಆಗುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟರು.

ರಾಷ್ಟ್ರೀಯ ತೆರಿಗೆ ಸಲಹೆಗಾರರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನ ಆರ್ಥಿಕ ಬೆಳವಣಿಗೆ ಹೊಂದಲು ಬಯಸುತ್ತಾನೆ. ನಾನು ಹಣಕಾಸು ಸಚಿವನಾಗಿ ಅಧಿಕಾರ ಸ್ವೀಕರಿಸಿದಾಗ ಆರ್ಥಿಕ ಪರಿಸ್ಥಿತಿ ಸರಿ ಇರಲಿಲ್ಲ ಎಂದರು.

ನಾನು ಹಿರಿಯ ಅಧಿಕಾರಿಗಳ ಜೊತೆ ಸಭೆ ನಡೆಸಿ ಮನಸು ಮಾಡಿದರೆ ಯಾವುದು ಕಷ್ಟವಲ್ಲ ಎಂದು ಯೋಚಿಸಿ ಕಾರ್ಯ ಪ್ರವೃತ್ತನಾದೆ. ಮೂರು ತಿಂಗಳಲ್ಲಿ ಶೇ. 70 ರಷ್ಟು ಆದಾಯ ಹೆಚ್ಚಳ ಮಾಡಿದೆ ಎಂದರು.

ರಾಜ್ಯದ ಆದಾಯ ಹೆಚ್ಚಿಸಿ ಎರಡು ವರ್ಷದ ಅವಧಿಯಲ್ಲಿ ಸರ್‌ಪ್ಲಸ್ ಬಜೆಟ್ ಮಂಡನೆ ಮಾಡಿದೆ. ಈಗಿನ ಸರ್ಕಾರ ಉಚಿತ ಯೋಜನೆಗಳಿಗೆ ಹೆಚ್ಚಿನ ಹಣ ವೆಚ್ಚ ಮಾಡುತ್ತಿದ್ದು, ಸರ್ಕಾರಕ್ಕೆ ಆದಾಯ ಕಡಿಮೆಯಾಗುತ್ತದೆ ಎಂದರು.

ರಾಜ್ಯದ ಆರ್ಥಿಕತೆ ಹೆಚ್ಚಿಸಲು ಸಹಕಾರ ನೀಡಿದ ತೆರಿಗೆದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಆರ್ಥಿಕತೆ ಬೆಳವಣಿಗೆಯಲ್ಲಿ ತೆರಿಗೆದಾರರ ಪಾತ್ರ ಮಹತ್ವದ್ದಾಗಿದೆ. ಅಂತಿಮವಾಗಿ ದೇಶದ ಅಭಿವೃದ್ಧಿ ಆಗಬೇಕು. ಅದರಲ್ಲಿ ತೆರಿಗೆದಾರರ ಪಾತ್ರ ಮುಖ್ಯವಾಗಿದೆ ಎಂದು ಹೇಳಿದರು.

ಆರ್ಥಿಕತೆ ಯಾವುದೇ ಒತ್ತಡವಿಲ್ಲದೇ ಬೆಳೆಯುವಂತಾಗಬೇಕು. ಆದಾಗ ಮಾತ್ರ ಪ್ರಧಾನಿ ನರೇಂದ್ರ ಮೋದಿಯವರ ಐದು ಟ್ರಿಲಿಯನ್ ಡಾಲರ್ ಗುರಿ ಮುಟ್ಟುವ ಕನಸು ಸಾಧ್ಯವಾಗಲಿದೆ.

ಆರಂಭದ ದಿನಗಳಲ್ಲಿ ಬಹುತೇಕರು ಜಿಎಸ್‌ಟಿಯನ್ನು ವಿರೋಧಿಸಿದ್ದರು. ಆದರೆ ಈಗ ಎಲ್ಲರು ಒಪ್ಪಿಕೊಂಡಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗುತ್ತಿದೆ ಎಂದರು.

# ಇಸ್ರೋದಿಂದ ಉಪಗ್ರಹ ತಂತ್ರಜ್ಞಾನ ಖಾಸಗಿಗೆ ಹಸ್ತಾಂತರ

ಬೆಂಗಳೂರು, ಆ. 5 - ಐ.ಎಂ.ಎಸ್. - 1 ಸೆಟಲೈಟ್ ಬಸ್ ತಂತ್ರಜ್ಞಾನವನ್ನು ಖಾಸಗಿ ಕಂಪನಿಯಾದ ಅಲ್ಫಾ ಡಿಸೈನ್ ಟೆಕ್ನಾಲಜಿಗೆ ವರ್ಗಾಯಿಸಿರುವುದಾಗಿ ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ತಿಳಿಸಿದೆ. ಇದರೊಂದಿಗೆ ಬಾಹ್ಯಾಕಾಶ ವಲಯದಲ್ಲಿ ಖಾಸಗಿ ವಲಯ ಭಾಗಿಯಾಗಲು ಹೆಚ್ಚಿನ ಅವಕಾಶ ದೊರೆತಿದೆ.

ಇಸ್ರೋದ ವಾಣಿಜ್ಯ ವಿಭಾಗವಾದ ನ್ಯೂಸ್ಪೇಸ್ ಇಂಡಿಯಾ ಮೂಲಕ ಈ ತಂತ್ರಜ್ಞಾನವನ್ನು ಹಸ್ತಾಂತರಿಸಲಾಗಿದೆ. ಖಾಸಗಿ ವಲಯ ಬಾಹ್ಯಾಕಾಶ ಉತ್ಪಾದನೆಯಲ್ಲಿ ತೊಡಗಲು ಇಸ್ರೋ ಉತ್ತೇಜನ ನೀಡುತ್ತಿದೆ. ಐಎಂಎಸ್ -1 ಬಸ್ 30 ಕೆಜಿ ಉಪಗ್ರಹದ ಸಾಮರ್ಥ್ಯ ಹೊಂದಿದೆ. ಇಸ್ರೋದ ಈ ಕ್ರಮ ತಂತ್ರಜ್ಞಾನ ಬೆಳವಣಿಗೆ ಹಾಗೂ ಸ್ವಾಲವಂಬನೆಗೆ ನೆರವಾಗುವ ನಿರೀಕ್ಷೆ ಇದೆ.

# 'ಹರಿಹರ ಶ್ರೀ' ಪ್ರಶಸ್ತಿಗಾಗಿ ಕವನ ಸಂಕಲನ ಆಹ್ವಾನ

ಹರಿಹರ, ಆ.5- ಇಲ್ಲಿನ ಸಾಹಿತ್ಯ ಸಂಗಮ ಸಂಸ್ಥೆಯಿಂದ ಕೊಡ ಮಾಡುವ ಹರಿಹರಶ್ರೀ ಪ್ರಶಸ್ತಿಗಾಗಿ 2021 ಹಾಗೂ 2022 ನೇ ಸಾಲಿನಲ್ಲಿ ಪ್ರಕಟಣೆಯಾದ ಕವನ ಸಂಕಲನಗಳಿಗೆ ಪ್ರತ್ಯೇಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಆಗಸ್ಟ್ 10 ರೊ ಳಗಾಗಿ ಕವನ ಸಂಕಲನ ಕಳಿಸಬೇಕಿದೆ. ವಿವರಕ್ಕೆ ಸಂಪರ್ಕಿಸಿ : ವಿ.ಬಿ. ಕೊಟ್ರೇಶಪ್ಪ (98449 69723), ಕಾರ್ಯದರ್ಶಿ ಎನ್.ಇ. ಸುರೇಶ್ (7795120617).

# ಹಡಗಲಿ : ಮೃದಂಗ ತರಬೇತಿ ಶಿಬಿರ

ಹೂವಿನಹಡಗಲಿ, ಆ.5- ರಂಗ ಚೈತನ್ಯ ಬಯಲಾಟ ಸಂಶೋಧನೆ ಮತ್ತು ಅಧ್ಯಯನ ಕೇಂದ್ರದ ಡಾ. ಬಸವರಾಜ ಮಲ್ಲಶೆಟ್ಟಿ ಬಯಲಾಟ ಕಾಲೇಜು ಹೂವಿನ ಹಡಗಲಿ ವತಿಯಿಂದ 10 ವಸತಿಯುತ ಮೃದಂಗ (ಮದ್ದಳೆ) ತರಬೇತಿ ಶಿಬಿರವನ್ನು ಆಗಸ್ಟ್ ಮೊದಲ ವಾರದಲ್ಲಿ ಆಯೋಜಿಸಲಾಗಿದೆ ಎಂದು ಸಂಶೋಧನಾ ನಿರ್ದೇಶಕ ಡಾ. ಕೆ. ರುದ್ರಪ್ಪ ತಿಳಿಸಿದ್ದಾರೆ.


## ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿ ಸಂಘ ನಿಯಮಿತ

ನಂ. 2037, ಬಸವ ಮಂಟಪ, 1ನೇ ಮುಖ್ಯರಸ್ತೆ, ವಿದ್ಯಾನಗರ, ದಾವಣಗೆರೆ-577 005. ಇಮೇಲ್ : 5mbssn21@gmail.com

**3ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ**

ಶರಣ ಮಾಗನೂರು ಬಸಪ್ಪ ಸೌಹಾರ್ದ ಸಹಕಾರಿ ಸಂಘ ನಿಯಮಿತ, ದಾವಣಗೆರೆ ಇದರ 2022-23ನೇ ಸಾಲಿನ 3ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 12.08.2023ನೇ ಶನಿವಾರ ಬೆಳಿಗ್ಗೆ 12.00 ಕ್ಕೆ ಸ್ಥಳ : ಶರಣ ಮಾಗನೂರು ಬಸಪ್ಪ ಸಭಾಭವನ, ವಿದ್ಯಾನಗರ 1ನೇ ಮುಖ್ಯರಸ್ತೆ, ದಾವಣಗೆರೆ ಅಧ್ಯಕ್ಷರಾದ ಶರಣ ಡಾ. ಹೆಚ್.ಎಸ್. ಮಂಜುನಾಥ್‌ರವರ ಘನ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆದುದರಿಂದ ಸರ್ವ ಸದಸ್ಯರು ಸಕಾಲಕ್ಕೆ ವಾರ್ಷಿಕ ಸಾಮಾನ್ಯ ಸಭೆಗೆ ಆಗಮಿಸಬೇಕಾಗಿ ವಿನಂತಿ.

**ಸಂಘದ 2021-22 ಮತ್ತು 2022-23ನೇ ಸಾಲಿನ ಪ್ರಗತಿಯ ಪಕ್ಷಿ ನೋಟ**

| ವಿವರಗಳು | 2021-22 (ಮೊತ್ತ ಲಕ್ಷ ರೂ.ಗಳಲ್ಲಿ) | 2022-23 (ಮೊತ್ತ ಲಕ್ಷ ರೂ.ಗಳಲ್ಲಿ) |
|---|---|---|
| ಷೇರು ಬಂಡವಾಳ | 9.34 | 13.60 |
| ಮೀಸಲು ಮತ್ತು ಇತರೆ ನಿಧಿಗಳು | 0.29 | 2.34 |
| ಠೇವಣಿಗಳು | 443.82 | 717.65 |
| ಸಾಲ ಮತ್ತು ಮುಂಗಡಗಳು | 202.60 | 437.99 |
| ದುಡಿಯುವ ಬಂಡವಾಳ | 455.27 | 742.64 |
| ನಿವ್ವಳ ಲಾಭ | 1.73 | 8.56 |

ವಿ.ಸೂ: ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದೇ ಇರುವ ಸದಸ್ಯರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಎಸ್. ಮುರುಗೇಶ್ ಮೊ.ನಂ. 9740983292, ಶ್ರೀ ಎಸ್. ವಿಜಯಕುಮಾರ್, ಶ್ರೀ ಎಸ್. ಸತೀಶಬಾಬು ಮೊ. ನಂ. 98867-89798, ಶ್ರೀಮತಿ ಶೈಲಜಾ ಮತ್ತು ಶ್ರೀಮತಿ ಪ್ರಭಾ ಎಲ್ಲರೂ ದಿವಂಗತ. ಸುವರ್ಣಮ್ಮ ಕೋಂ ಲೇಟ್ ಸದಾಶಿವಪ್ಪ ಇವರ ಮಕ್ಕಳಾಗಿದ್ದು, ಅವರ ವಾರಸುದಾರರಾಗಿದ್ದು, ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ :-

ಷೆಡ್ಯೂಲ್ ಸ್ವತ್ತು ದಾವಣಗೆರೆ ಸಿಟಿ, ಕಾಯಿಪೇಟೆಯಲ್ಲಿ ಬರುವ **ಮನೆ ಮತ್ತು ಖಾಲಿ ನಿವೇಶನ ನಂ. 563/1 ರಿಂದ 11 ವಿಸ್ತೀರ್ಣ 176' x 42'** ರ ಈ ಸ್ವತ್ತು ಈ ಹಿಂದೆ ಟಿ.ಎಂ. ಶರಣಯ್ಯ ಬಿನ್ ರುದ್ರಯ್ಯ ಇವರ ಮಾಲೀಕತ್ವದಲ್ಲಿ ಇದ್ದಂತಹ ಸ್ವತ್ತಾಗಿರುತ್ತದೆ. ಸದರಿ ಟಿ.ಎಂ. ಶರಣಯ್ಯ ಅವರು ದಿನಾಂಕ 24.11.1999 ರಂದು ಮರಣ ಹೊಂದಿರುತ್ತಾರೆ. ಸದರಿ ಟಿ.ಎಂ. ಶರಣಯ್ಯ ಇವರಿಗೆ ಇಬ್ಬರು ಹೆಂಡತಿಯರಿದ್ದು, ಮೊದಲನೇ ಹೆಂಡತಿ ಶ್ರೀಮತಿ ಹಾಲಮ್ಮ ಇದ್ದು, 2ನೇ ಹೆಂಡತಿ ಶ್ರೀಮತಿ ಟಿ.ಎಂ. ಜಯಮ್ಮ ಎಂದು ಇರುತ್ತಾರೆ. ಮೊದಲನೇ ಹೆಂಡತಿಯು ಮರಣ ಹೊಂದಿದ್ದು, ಅವರಿಗೆ ಶ್ರೀಮತಿ ಸುವರ್ಣಮ್ಮ ಎಂಬ ಏಕೈಕ ಮಗಳಿರುತ್ತಾರೆ. 2ನೇ ಹೆಂಡತಿ ಟಿ.ಎಂ. ಜಯಮ್ಮ ಇವರಿಗೆ ಶ್ರೀಮತಿ ಟಿ.ಎಂ. ದ್ರಾಕ್ಷಾಯಣಮ್ಮ ಎಂಬ ಏಕೈಕ ಮಗಳಿರುತ್ತಾರೆ. ನಮ್ಮ ಕಕ್ಷಿದಾರರು ಟಿ.ಎಂ. ಶರಣಯ್ಯ ಇವರ ಮೊದಲನೇ ಹೆಂಡತಿಯ ಮಗಳಾದ ಸುವರ್ಣಮ್ಮ ಇವರ ಮಕ್ಕಳುಗಳಾಗಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಬಗ್ಗೆ ಈ ಹಿಂದೆ ದಾವಣಗೆರೆಯ ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಟಿ.ಎಂ. ಶರಣಯ್ಯನವರ 2ನೇ ಹೆಂಡತಿಯಾದ ಶ್ರೀಮತಿ ಟಿ.ಎಂ. ಜಯಮ್ಮ ಇವರು ನಮ್ಮ ಕಕ್ಷಿದಾರರುಗಳ ವಿರುದ್ಧ ಮತ್ತು ಅವರ ಮಗಳಾದ ಶ್ರೀಮತಿ ಟಿ.ಎಂ. ದ್ರಾಕ್ಷಾಯಣಮ್ಮ ಇವರುಗಳ ವಿರುದ್ಧ ಪಾಲು ವಿಭಾಗಕ್ಕಾಗಿ **ಓ.ಎಸ್.ನಂ. 6/2001** ರ ದಾವೆಯನ್ನು ಸಲ್ಲಿಸಿದ್ದರು. **ಸದರಿ ದಾವೆಯಲ್ಲಿ ನಮ್ಮ ಕಕ್ಷಿದಾರರಿಗೆ 1/3ನೇ ಭಾಗದ ಹಿಸ್ಸೆ,** ಶ್ರೀಮತಿ ಟಿ.ಎಂ. ಜಯಮ್ಮ ಇವರಿಗೆ 1/3ನೇ ಭಾಗದ ಹಿಸ್ಸೆ ಮತ್ತು ಟಿ.ಎಂ. ಜಯಮ್ಮ ಇವರ ಮಗಳಾದ ಶ್ರೀಮತಿ ದ್ರಾಕ್ಷಾಯಣಮ್ಮ ಇವರಿಗೆ 1/3ನೇ ಭಾಗದ ಹಿಸ್ಸೆ ಇರುತ್ತದೆ ಎಂದು ಆದೇಶವಾಗಿರುತ್ತದೆ. ನಂತರ ಸದರಿ ಅಸಲು ದಾವೆ ನಂ. 6/2001ರ ಆದೇಶದ ಪ್ರಕಾರ **ಎಫ್.ಡಿ.ಪಿ.ನಂ. 19/2005 ರಂತೆ ಅಂತಿಮ ಡಿಕ್ರಿಗಾಗಿ ಮಾನ್ಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಅದರಂತೆ ಮಾನ್ಯ ನ್ಯಾಯಾಲಯವು ದಿನಾಂಕ17.06.2010 ರಂದು ಅಂತಿಮ ಡಿಕ್ರಿ ಆದೇಶ ಮಾಡಿರುತ್ತದೆ.**

ಈ ರೀತಿ ಮೇಲ್ಕಂಡ ನ್ಯಾಯಾಲಯದ ಆದೇಶದ ಪ್ರಕಾರ ಕೆಳಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ನಮ್ಮ ಕಕ್ಷಿದಾರರುಗಳು ಜಂಟಿಯಾಗಿ 1/3 ಭಾಗದ ಹಿಸ್ಸೆಯ ಹಕ್ಕನ್ನು ಹೊಂದಿರುತ್ತಾರೆ. ಈ ರೀತಿ ಸಿವಿಲ್ ನ್ಯಾಯಾಲಯದಲ್ಲಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಅಂತಿಮ ಡಿಕ್ರಿ ಆದೇಶವಾಗಿದ್ದರೂ ಸಹ ದಾವಣಗೆರೆ ಮಹಾನಗರಪಾಲಿಕೆ ಕಂದಾಯ ದಾಖಲೆಗಳಲ್ಲಿ ಷೆಡ್ಯೂಲ್ ಸ್ವತ್ತಿನ ಖಾತೆಯು ಈಗಲೂ ಸಹ ಶ್ರೀಮತಿ ಟಿ.ಎಂ. ಜಯಮ್ಮ ಕೋಂ ಲೇಟ್ ಟಿ.ಎಂ. ಶರಣಯ್ಯ ಇವರ ಹೆಸರಿಗೆ ಖಾತೆ ಮುಂದುವರೆದಿರುತ್ತದೆ. ಇತ್ತೀಚಿಗೆ ನಮ್ಮ ಕಕ್ಷಿದಾರರಿಗೆ ತಿಳಿದುಬಂದಿರುವುದೇನೆಂದರೆ, **ಶ್ರೀಮತಿ ಟಿ.ಎಂ. ಜಯಮ್ಮ ಕೋಂ ಲೇಟ್ ಟಿ.ಎಂ. ಶರಣಯ್ಯ ಇವರು ತಮ್ಮ ಹೆಸರಿಗೆ ಮಹಾನಗರಪಾಲಿಕೆಯ ಕಂದಾಯ ದಾಖಲೆಯಲ್ಲಿ ಖಾತೆ ಇರುವುದನ್ನು ದುರ್ಲಾಭ ಪಡೆದು ಷೆಡ್ಯೂಲ್ ಸ್ವತ್ತನ್ನು ಮೂರನೇ ವ್ಯಕ್ತಿಗಳಿಗೆ ಮಾರಾಟ ಮಾಡಲು ಪ್ರಯತ್ನ ಮಾಡುತ್ತಿರುವುದು ತಿಳಿದು ಬಂದಿರುತ್ತದೆ.** ಈ ರೀತಿ ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಶ್ರೀಮತಿ ಟಿ.ಎಂ. ಜಯಮ್ಮ ಕೋಂ ಲೇಟ್ ಟಿ.ಎಂ. ಶರಣಯ್ಯ ಮತ್ತು ಅವರ ಮಗಳಾದ ಶ್ರೀಮತಿ ಟಿ.ಎಂ. ದ್ರಾಕ್ಷಾಯಣಮ್ಮ ಇವರುಗಳಿಗೆ ಸಂಪೂರ್ಣ ಹಕ್ಕು, ಮಾಲೀಕತ್ವ ಮತ್ತು ಅಧಿಕಾರ ಇರುವುದಿಲ್ಲ. **'ಷೆಡ್ಯೂಲ್ ಸ್ವತ್ತಿನಲ್ಲಿ ಈ ಮೇಲೆ ಹೇಳಿದ ಸಿವಿಲ್ ನ್ಯಾಯಾಲಯದ ಅಂತಿಮ ಡಿಕ್ರಿಯ ಪ್ರಕಾರ ನಮ್ಮ ಕಕ್ಷಿದಾರರಿಗೆ 1/3ನೇ ಭಾಗದ ಹೆಸ್ಸೆಯ ಹಕ್ಕು ಇರುತ್ತದೆ.**

ಆ ಕಾರಣ ಯಾರೂ ಸಹ ಷೆಡ್ಯೂಲ್ ಸ್ವತ್ತಿನ ಬಗ್ಗೆ ಶ್ರೀಮತಿ ಟಿ.ಎಂ. ಜಯಮ್ಮ ಕೋಂ ಲೇಟ್ ಟಿ.ಎಂ. ಶರಣಯ್ಯ ಮತ್ತು ಅವರ ಮಗಳಾದ ಶ್ರೀಮತಿ ಟಿ.ಎಮ. ದ್ರಾಕ್ಷಾಯಣಮ್ಮ ಇವರೊಂದಿಗೆ ಯಾವುದೇ ರೀತಿ ಕ್ರಯ ಮತ್ತು ಇತರೆ ಪರಭಾರೆ ವಗೈರೆ ವ್ಯವಹಾರ ಮಾಡಿದಲ್ಲಿ **ನಮ್ಮ ಕಕ್ಷಿದಾರರ 1/3ನೇ ಭಾಗದ ಹಕ್ಕಿಗೆ ಬಾಧಕ ಉಂಟಾಗುತ್ತದೆ ಹಾಗೂ ಖರೀದಿದಾರರಿಗೆ 1/3 ಭಾಗದ ಹಿಸ್ಸೆಯ ಹಕ್ಕು ಪ್ರಾಪ್ತವಾಗುವುದಿಲ್ಲ** ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ರೀತಿಯ ವ್ಯವಹಾರ ಮಾಡುವ ಪೂರ್ವದಲ್ಲಿ ನಮ್ಮ ಕಕ್ಷಿದಾರರನ್ನಾಗಲೀ ಅಥವಾ ಅವರ ಪರ ವಕೀಲರನ್ನಾಗಲೀ ಸಂಪರ್ಕಿಸತಕ್ಕದ್ದೆಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ ಮೂಲಕ ಹೊರಡಿಸಲಾಗಿದೆ.

**ಷೆಡ್ಯೂಲ್** : ದಾವಣಗೆರೆ, ಸಿಟಿ, ಕಾಯಿಪೇಟೆಯಲ್ಲಿ ಬರತಕ್ಕ ಮನೆ ಮತ್ತು ಖಾಲಿ ನಿವೇಶನ ಇದರ ಡೋರ್ ನಂ.563/1 ರಿಂದ 11 ವಿಸ್ತೀರ್ಣ 176' x 42' ವುಳ್ಳ ಸ್ವತ್ತಿಗೆ ಚಕ್ಕುಬಂಧಿ:-

ಪೂರ್ವಕ್ಕೆ : ಪ್ಯಾಸೇಜ್ ಮತ್ತು ಆನಂತರ ಮುಗೇಶಪ್ಪ ಮತ್ತು ಅಂಬಕ್ಕ ಇವರ ಸ್ವತ್ತು. ಪಶ್ಚಿಮಕ್ಕೆ : ಮಂಗಳಾಬಾಯಿ ಪಾಂಡುರಂಗಪ್ಪ ವರ್ಣೇಕರ್ ಮತ್ತು ಲಕ್ಷ್ಮೀದೇವಿ ಇವರುಗಳ ಸ್ವತ್ತುಗಳು. ಉತ್ತರಕ್ಕೆ : ರಸ್ತೆ. ದಕ್ಷಿಣಕ್ಕೆ : ರಸ್ತೆ.

ಸಂಪರ್ಕಿಸಬೇಕಾದ ವಿಳಾಸ :
**ಶ್ರೀ ಆರ್.ಟಿ. ವಿನಯಕುಮಾರ್**, ವಕೀಲರು,
#82/18, ಪಿ.ಬಿ. ರಸ್ತೆ, ಅರುಣಾ ಟಾಕೀಸ್ ಹತ್ತಿರ,
ದಾವಣಗೆರೆ. **ಮೊಬೈಲ್ ನಂ. 98445 97838**

**ಸಹಿ/- (ಆರ್.ಟಿ. ವಿನಯಕುಮಾರ್)** ಅಡ್ವೋಕೇಟ್,
#1862/19, 4ನೇ ಮೇನ್, ಹೆಚ್.ಆರ್.ಬಿ. ನಗರ,
ಸೇಂಟ್ ಜಾನ್ಸ್ ಸ್ಕೂಲ್ ಹತ್ತಿರ, ಶಿವಕುಮಾರ ಸ್ವಾಮಿ ಬಡಾವಣೆ,
1ನೇ ಹಂತ, ದಾವಣಗೆರೆ.

# 2013 ರಿಂದ 2018 ರ ಅವಧಿಯ ಹಗರಣಗಳ ತನಿಖೆಗೆ ಒತ್ತಾಯ



ದಾವಣಗೆರೆ, ಆ. 5- ಸರ್ಕಾರಿ, ಪಾಲಿಕೆ ಜಾಗ, ರಾಜ ಕಾಲುವೆ, ಪಾರ್ಕ್ ಒತ್ತುವರಿ, ಅಕ್ರಮ ಡೋರ್ ಹಗರಣದ ತನಿಖೆಗೆ ಕಾಂಗ್ರೆಸ್ ಪಾಲಿಕೆ ಸದಸ್ಯರು ಧ್ವನಿ ಎತ್ತಿದ್ದು ಸ್ವಾಗತಾರ್ಹ. 2013 ರಿಂದ 2018ರವರೆಗಿನ ಹಗರಣಗಳ ಬಗ್ಗೆಯೂ ನಿಸ್ಪಕ್ಷಪಾತ ತನಿಖೆ ನಡೆಸಲಿ ಎಂದು ಪಾಲಿಕೆ ಸದಸ್ಯರೂ ಆಗಿರುವ ಮಾಜಿ ಮೇಯರ್ ಡಿ.ಎಸ್. ಉಮಾ ಪ್ರಕಾಶ್ ಒತ್ತಾಯಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ 2013 ರಿಂದ 2018ರವರೆಗೆ ಆದ ಎಲ್ಲಾ ಹಗರಣಗಳ ಬಗ್ಗೆಯೂ ತನಿಖೆ ಆಗಬೇಕು. 2013 ರಿಂದ 18ರವರೆಗಿನ ಈಗಿನ 35ನೇ ವಾರ್ಡ್ ಆಗಿದ್ದ ಆವರಗೆರೆ ಸರ್ವೇ ನಂಬರ್ 240 ರಿಂದ 244ರಲ್ಲಿ ನಡೆದ ಅಕ್ರಮಗಳ ದಾಖಲೆಗಳ ಸಮೇತ ಸಂಬಂಧಿಸಿದ ಅಧಿಕಾರಿಗಳಿಗೆ ತಾವು ನೀಡಿದ್ದು,ಈ ಅಕ್ರಮದ ಬಗ್ಗೆ ಡೋರ್ ನಂಬರ್ ರದ್ದುಪಡಿಸಲು ಬೇಕಾದ ಕ್ರಮ ಕೈಗೊಳ್ಳುವ ಭರವಸೆ ಉಪ ಆಯುಕ್ತರು ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಅಕ್ರಮ ಡೋರ್ ನಂಬರ್ ವಿಷಯದಲ್ಲಿ ದಾಖಲೆಗಳನ್ನು ತಿದ್ದಿ ತಪ್ಪಿತಸ್ಥರಾದ ಸಿಬ್ಬಂದಿ ವಿರುದ್ಧ ಕಾನೂನು ಪ್ರಕಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುತ್ತಿರುವ ಪಾಲಿಕೆ ಆಯುಕ್ತರಾದ ರೇಣುಕಾ, ಉಪ ಆಯುಕ್ತರಾದ ಲಕ್ಷ್ಮಿ ಅವರಂತಹ ದಿಟ್ಟ ಅಧಿಕಾರಿಗಳ ಕ್ರಮ ಸ್ವಾಗತಾರ್ಹವಾಗಿದೆ. ತಪ್ಪಿತಸ್ಥ ಅಧಿಕಾರಿ, ಸಿಬ್ಬಂದಿಗೆ ಕೇವಲ ಅಮಾನತ್ತು ಮಾತ್ರ ಶಿಕ್ಷೆ ಆಗಬಾರದು. ಮುಂದೆ ಯಾರೂ ಇಂತಹ ತಪ್ಪು ಮಾಡದಂತೆ ಎಚ್ಚರಿಕೆಯ ಪಾಠವೂ ಆಗಬೇಕು ಎಂದು ಹೇಳಿದ್ದಾರೆ.

ಕಳೆದೈದು ತಿಂಗಳಲ್ಲಿ ಪಾಲಿಕೆಯ ನಾಲ್ವರು ಸಿಬ್ಬಂದಿ ಬೇರೆ ಬೇರೆ ಸಮಯದಲ್ಲಿ ಅಮಾನತುಗೊಂಡಿದ್ದಾರೆ. ವಾಸ್ತವ ಹೀಗಿದ್ದರೂ ಅಕ್ರಮಗಳನ್ನು ನಡೆಸುವ ಧೈರ್ಯವನ್ನು ಮತ್ತೆ ಮತ್ತೆ ಕೆಲ ಅಧಿಕಾರಿ, ಸಿಬ್ಬಂದಿ ತೋರುತ್ತಿದ್ದಾರೆ. ಇಂತಹ ತಪ್ಪಿತಸ್ಥರ ಅಧಿಕಾರಿ ಸಿಬ್ಬಂದಿಯನ್ನು ಸೇವೆಯಿಂದಲೇ ವಜಾ ಮಾಡುವ, ಕ್ರಿಮಿನಲ್ ಕೇಸ್ ದಾಖಲಿಸುವ ಕೆಲಸವೂ ಆಗಬೇಕು. ಸರ್ಕಾರಿ ಆಸ್ತಿಗೆ ಸಂಕಷ್ಟ ತಂದೊಡ್ಡುವವರ ಯಾವುದೇ ಕಾರಣಕ್ಕೂ ಕಡೆಗಣಿಸದೇ, ಇತರರಿಗೂ ಎಚ್ಚರಿಕೆ ಪಾಠ ಆಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಅದಷ್ಟು ಬೇಗನೆ 32ನೇ ವಾರ್ಡ್‌ನಲ್ಲಿ ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿತವಾದ ನಕಾಶೆ ಪ್ರಕಾರ ಬಿಟ್ಟಿರುವ ಬಯಲು ಜಾಗವನ್ನು ಅತಿಕ್ರಮಿಸಿ, ಅಕ್ರಮ ಡೋರ್ ನಂಬರ್ ನೀಡಿರುವುದನ್ನ ತಕ್ಷಣ ರದ್ದುಪಡಿಸಿ, ಪಾಲಿಕೆಯಿಂದ ಬೇಲಿ ಹಾಕಿಸುವ ಮೂಲಕ ಅಂತಹ ಆಸ್ತಿಯನ್ನು ಪಾಲಿಕೆಯ ಸುಪರ್ದಿಗೆ ಪಡೆಯಬೇಕು ಎಂದು ಉಮಾ ಪ್ರಕಾಶ್ ಅವರು ಪಾಲಿಕೆ ಆಯುಕ್ತರಾದ ರೇಣುಕಾ, ಉಪ ಆಯುಕ್ತರಾದ ಲಕ್ಷ್ಮಿ ಅವರನ್ನು ಒತ್ತಾಯಿಸಿದ್ದಾರೆ.

# ಬೆಳೆವಿಮೆ ಪಾವತಿಸಲು ಅವಧಿ ವಿಸ್ತರಣೆ: ಬಿ.ಎಂ. ಸತೀಶ್ ಸಂತಸ

ದಾವಣಗೆರೆ, ಆ. 5- ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ಬೆಳೆವಿಮೆ ಪ್ರೀಮಿಯಂ ಪಾವತಿಸಲು ಜುಲೈ 31 ಇದ್ದ ಕಡೆ ದಿನಾಂಕವನ್ನು ಆಗಸ್ಟ್ 7ರ ತನಕ ವಿಸ್ತರಣೆ ಮಾಡಿ, ಕೇಂದ್ರದ ಬಿಜೆಪಿ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದ ರೈತರಿಗೆ ಸಂತಸ ತಂದಿದೆ ಎಂದು ಮಾಜಿ ಎಪಿಎಂಸಿ ಅಧ್ಯಕ್ಷ ಕೊಳೇನಹಳ್ಳಿ ಬಿ.ಎಂ. ಸತೀಶ್ ಹೇಳಿದ್ದಾರೆ.

ಆಗಸ್ಟ್ 7 ರೊಳಗೆ ಪ್ರೀಮಿಯಂ ಪಾವತಿಸುವ ರೈತರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಲು ಮುಂದಿನ 15 ದಿನಗಳವರೆಗೆ ಕಾಲಾವಕಾಶ ನೀಡಿದೆ.

ವಾಡಿಕೆಯಂತೆ ಮೇ ತಿಂಗಳ ಅಂತ್ಯದಲ್ಲಿ ಮುಂಗಾರು ಮಳೆ ಪ್ರಾರಂಭವಾಗಲಿಲ್ಲ. ಜೂನ್ ತಿಂಗಳಲ್ಲಿಯೂ ಮೊದಲಾರ್ಧದಲ್ಲಿ ವಾಡಿಕೆಯಷ್ಟು ಮಳೆಯಾಗದೇ ವಿಳಂಬವಾಗಿದ್ದರಿಂದ ಮುಂಗಾರು ಹಂಗಾಮಿನ ಬಿತ್ತನೆ ಕಾರ್ಯ ಚಟುವಟಿಕೆಗಳಿಗೆ ಹಿನ್ನಡೆಯಾಯಿತು. ಜುಲೈ ಮೊದಲ ವಾರದಲ್ಲಿ ಸ್ವಲ್ಪ ಮಳೆಯಾಗಿದ್ದರಿಂದ ರೈತರು ಬಿತ್ತನೆ ಕಾರ್ಯ ಚುರುಕುಗೊಳಿಸಿದರು. ಅಲ್ಲಿಂದ ಬಿತ್ತನೆ, ಹೊಲ ಉಳಿಮೆ, ಮರು ಬಿತ್ತನೆ ಆರಂಭಗೊಂಡಿದ್ದರಿಂದ ಬೆಳೆವಿಮೆ ಯೋಜನೆ ಕಂತು ಪಾವತಿಸಲು ಕಡೆ ದಿನಾಂಕ ಜುಲೈ 31 ರೊಳಗೆ ರೈತರಿಗೆ ಸಾಧ್ಯವಾಗಿರಲಿಲ್ಲ. ಆದ್ದರಿಂದ 7 ದಿನಗಳ ಕಾಲ ವಿಸ್ತರಣೆ ಮಾಡಿರುವುದು ರೈತರಿಗೆ ಯೋಜನೆ ಪ್ರೀಮಿಯಂ ಪಾವತಿಸಲು ಕಾಲಾವಕಾಶ ಸಿಕ್ಕಿದೆ ಎಂದು ಸತೀಶ್ ಹೇಳಿದ್ದಾರೆ.

# ಮನೆ ಕಳ್ಳತನ: ಇಬ್ಬರ ಬಂಧನ



ದಾವಣಗೆರೆ, ಆ.5- ಹೆಬ್ಬಾಳು ಗ್ರಾಮದಲ್ಲಿನ ಮನೆ ಕಳ್ಳತನ ಪ್ರಕರಣ ಬೇಧಿಸಿರುವ ಪೊಲೀಸರು ಅದೇ ಗ್ರಾಮದ ಹಮಾಲಿ ಕೆಲಸ ಮಾಡುತ್ತಿದ್ದ ಹನುಮಂತಪ್ಪ ಹಾಗೂ ಮಂಡಲೂರು ಗ್ರಾಮದ ಟೀ ಅಂಗಡಿ ವ್ಯಾಪಾರಿ ಹಾಲೇಶಪ್ಪ ಎಂಬುವರನ್ನು ಬಂಧಿಸಿ, ಅವರಿಂದ ಕಳವು ಹಾಗೂ ಸುಲಿಗೆಯಾಗಿದ್ದ 3.06 ಲಕ್ಷ ರೂ. ಬೆಲೆಯ ಆಭರಣ ವಶ ಪಡಿಸಿಕೊಂಡಿದ್ದಾರೆ.

2022ರ ಸೆಪ್ಟಬರ್ 25ರಂದು ಹೆಬ್ಬಾಳು ಗ್ರಾಮದ ರುದ್ರಮುನಿ ಅವರು ಮನೆಯಲ್ಲಿ ಕಳ್ಳತನವಾಗಿರುವುದಾಗಿ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪಿಎಸ್‌ಐ ಎ.ಆರ್. ಮುಂದಿನ ಮನಿ, ಸಿಬ್ಬಂದಿಗಳಾದ ದೇವೇಂದ್ರನಾಯ್ಕ, ಅಣ್ಣಯ್ಯ, ಮಹಮ್ಮದ್ ಯೂಸೂಫ್ ಅತ್ತಾರ್, ರಾಜು ಲವಾಣಿ, ವೀರೇಶ್, ಗಣೇಶ್ ನಾಯ್ಕ, ಬಸವರಾಜ ತಂಡ ಆರೋಪಿಗಳನ್ನು ಪತ್ತೆ ಹಚ್ಚಿದ್ದು, ಎಸ್ಪಿ ಡಾ.ಕೆ. ಅರುಣ್ ತಂಡವನ್ನು ಶ್ಲಾಘಿಸಿದ್ದಾರೆ.

# ನಗರದ ಜೆಜೆಎಂ ಮೆಡಿಕಲ್ ಕಾಲೇಜಿನ ಮಳೆಗಾಲದ ಉತ್ಸವ

'ಮಾನ್ಸೂನ್ ಫಿಯಸ್ಟ'ದ ಮುಂದುವರೆದ ಭಾಗವಾಗಿ ಇಂದು ಬೆಳಿಗ್ಗೆ 11 ಜಿಲ್ಲಾ ಕ್ರೀಡಾಂಗಣದಲ್ಲಿ ದೇಸಿ ಆಟಗಳಾದ ಬುಗುರಿ, ಲಗೋರಿ ಚಿನ್ನೀ ದಾಂಡು, ಗೋಲಿ ಮತ್ತು ಕುಂಟಬಿಲ್ಲೆಯನ್ನು ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದೆ. ಆಟಗಳನ್ನು 16ನೇ ವಾರ್ಡಿನ ಕಾರ್ಪೊರೇಟರ್ ಎ. ನಾಗರಾಜ್ ಉದ್ಘಾಟಿಸುವರು. ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್ ರವರು ಉಪಸ್ಥಿತರಿರುವರು.

# ನಗರದಲ್ಲಿ 'ಗಿಡಮೂಲಿಕೆ ದಿನಾಚರಣೆ'

ಪತಂಜಲಿ ಯೋಗ ಸಮಿತಿ, ಭಾರತ್ ಸ್ವಾಭಿಮಾನ್ ಟ್ರಸ್ಟ್, ಪತಂಜಲಿ ಮಹಿಳಾ ಯೋಗ ಸಮಿತಿ, ಹಾಗೂ ಕಿಸಾನ್ ಸೇವಾ ಸಮಿತಿ, ದಾವಣಗೆರೆ ಇವರ ವತಿಯಿಂದ ಹರಿದ್ವಾರದ ಯೋಗ ಋಷಿ ಬಾಬಾ ರಾಮದೇವ್ ಜೀ ಮಹಾರಾಜ್ ಇವರೊಂದಿಗೆ ಹರಿದ್ವಾರದಲ್ಲಿ ಪತಂಜಲಿ ಯೋಗ ಪೀಠ ಟ್ರಸ್ಟ್ ಹಾಗೂ ದಿವ್ಯ ಯೋಗ ಫಾರ್ಮಸಿಯನ್ನು ಸ್ಥಾಪಿಸಲು ಕಾರಣರಾದ ಆಚಾರ್ಯ ಬಾಲಕೃಷ್ಣ ಜೀ ಇವರ ಜನ್ಮದಿನಾಚರಣೆಯ ಪ್ರಯುಕ್ತ 'ಜಡಿ ಬೂಟಿ ದಿವಸ್ ' ಅಥವಾ 'ಗಿಡಮೂಲಿಕೆ ದಿನಾಚರಣೆ'ಯನ್ನು ಇಂದು ಬೆಳಿಗ್ಗೆ 5.30ಕ್ಕೆ ಸಿದ್ಧಗಂಗಾ ಶಾಲೆಯಲ್ಲಿ ಆಚರಿಸಲಾಗುತ್ತಿದೆ.

ಇದೇ ಸಂದರ್ಭದಲ್ಲಿ ಸಿದ್ಧಗಂಗಾ ಯೋಗ ಕೇಂದ್ರದ 10ನೇ ವಾರ್ಷಿಕೋತ್ಸವ ಸಮಾರಂಭವನ್ನೂ ಹಮ್ಮಿಕೊಳ್ಳಲಾಗಿದೆ.

ಪತಂಜಲಿ ಯೋಗ ಸಮಿತಿಯ ಮಂಡಲ ಪ್ರಭಾರಿ ಎಸ್.ಎಸ್. ಷಣ್ಮುಖ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಶ್ರೀಮತಿ ಜಸ್ಟೀನ್ ಡಿಸೋಜಾ, ಉತ್ತರ ಕರ್ನಾಟಕ ರಾಜ್ಯ ಮಹಿಳಾ ಪತಂಜಲಿ ಯೋಗ ಸಮಿತಿಯ ರಾಜ್ಯ ಪ್ರಭಾರಿ ಶ್ರೀಮತಿ ಆರತಿ ಕಾನಗೋ, ದಾವಣಗೆರೆಯ ಪಾರಂಪರಿಕ ವೈದ್ಯರು ಹಾಗೂ ಕರ್ನಾಟಕ ರಾಜ್ಯ ಪಾರಂಪರಿಕ ವೈದ್ಯರ ಸಂಘದ ಮಾಜಿ ಅಧ್ಯಕ್ಷ ನೇರ್ಲಿಗಿ ಗುರುಸಿದ್ದಪ್ಪ ಇವರು ಆಗಮಿಸಿ ಸನ್ಮಾನ ಸ್ವೀಕರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀಮತಿ ಆರತಿ ಕಾನಗೋ ಇವರು 'ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ' ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಶ್ರೀ ನೇರ್ಲಿಗಿ ಗುರುಸಿದ್ದಪನವರು 'ಹಿತ್ತಲ ಗಿಡವೇ ಮದ್ದು' ಎಂಬ ವಿಷಯದ ಕುರಿತು ಗಿಡಮೂಲಿಕೆಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ.

# ವಿದ್ಯೆ ಜೊತೆ ಮಾನವೀಯ ಗುಣಗಳನ್ನು ಕಲಿಸಿ: ಕಿರಣ್ ದೇಸಾಯಿ



ದಾವಣಗೆರೆ, ಆ. 5- ಮಕ್ಕಳಿಗೆ ಉತ್ತಮ ವಿದ್ಯೆ ಜೊತೆ ಮಾನವೀಯ ಗುಣಗಳನ್ನು ಕಲಿಸಿಕೊಡಬೇಕು. ಮಕ್ಕಳು ಧರಿಸುವ ಉಡುಪಿನ ಬಗ್ಗೆಯೂ ವಿಶೇಷವಾದ ಅರಿವು ಮೂಡಿಸುವ ಅಗತ್ಯತೆ ಇದೆ ಎಂದು ಶಿವಮೊಗ್ಗದ ಕಮಲಾ ನೆಹರು ಕಾಲೇಜಿನ ನಿವೃತ್ತ ಪ್ರಾಧ್ಯಾಪಕರಾದ ಕಿರಣ್ ಆರ್. ದೇಸಾಯಿ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಶಾಖೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ಶಾಖೆಯ ನಾಲ್ಕನೇ ವಾರ್ಷಿಕೋತ್ಸವ, 'ಅತ್ಯಮ್ಮನ ಸದನ' ಹಾಗೂ 'ಕವನದಲ್ಲರಳಿದ ತಿನಿಸುಗಳು' ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ಅತ್ತೆ-ಸೊಸೆಯರ ಮಧ್ಯೆ ಸಾಮಾಜಿಕ ಸಂಬಂಧ ಏರ್ಪಡಬೇಕಾಗಿದೆ. ಮಹಿಳೆ ಕೇವಲ ಅಡುಗೆ ಮನೆಗೆ ಸೀಮಿತವಾಗದೇ ಅಕ್ಷರ ಲೋಕಕ್ಕೆ ತನ್ನದೇ ಆದ ಸಾಹಿತ್ಯಿಕ ಕೊಡುಗೆ ನೀಡುವ ಮೂಲಕ ಪರಿಚಿತಳಾಗಿದ್ದಾಳೆ.ಇಂಥಹ ಮಹಿಳೆಯರ ಅಸ್ಮಿತೆಯನ್ನು ಗುರುತಿಸುವ ಕೆಲಸವನ್ನು ಕರ್ನಾಟಕ ಲೇಖಕಿಯರ ಸಂಘ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಮನೆಗಳಲ್ಲಿ ಕೊಠಡಿಗಳು ಹೆಚ್ಚು ಹೆಚ್ಚು ವಿಸ್ತಾರಗೊಳ್ಳುತ್ತಿದ್ದಂತೆಯೇ ಮನಸುಗಳು ಸಂಕೀರ್ಣಗೊಳ್ಳುತ್ತಿವೆ. ಪ್ರತಿಯೊಬ್ಬ ಮಹಿಳೆಯಲ್ಲೂ ತನ್ನದೇ ಆದ ಪ್ರತಿಭೆ ಇದ್ದೇ ಇರುತ್ತದೆ. ಅದನ್ನು ಬರವಣಿಗೆ ಮೂಲಕ ಅನಾವರಣಗೊಳಿಸುವ ಪ್ರಯತ್ನ ಮಾಡಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ 'ಕವನದಲ್ಲರಳಿದ ತಿನಿಸುಗಳು' ಕೃತಿ ಬಿಡುಗಡೆ ಮಾಡಿ ಮಾತನಾಡಿ, ಹೆಣ್ಣು ಮಕ್ಕಳು ಹೊರಗೇ ಬಾರದೇ ಇರುವಂತಹ ಕಾಲದಲ್ಲೂ ಮಾಜಿ ಸಚಿವೆ ನಾಗಮ್ಮ ಕೇಶವಮೂರ್ತಿ ಅವರು ವನಿತಾ ಸಮಾಜವನ್ನು ಆರಂಭ ಮಾಡುವ ಮೂಲಕ ಮಹಿಳೆಯರಿಗೆ ಶಕ್ತಿಯಾಗಿ ನಿಂತರು. ಪುರುಷರಿಗಿಂತ ನಾವೇನು ಕಡಿಮೆ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆಂದರು.

ಲೇಖಕಿಯರು ಸಹ ತಮ್ಮ ಅತ್ಯುತ್ತಮ ಬರವಣಿಗೆ ಮೂಲಕ ಅಕ್ಷರ ಲೋಕಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಾ ಬರುತ್ತಿದ್ದಾರೆಂದು ಹೇಳಿದರು. ಕುವೆಂಪು ಕನ್ನಡ ಭವನದಲ್ಲಿ ಇದುವರೆಗೂ 72 ಸಾಹಿತ್ಯ ಕೃತಿಗಳು ಬಿಡುಗಡೆಯಾಗಿರುವುದು ಸಂತಸದ ವಿಚಾರ ಎಂದರು.

ಶಿವಮೊಗ್ಗ ಕರ್ನಾಟಕ ಸಂಘದ ನಿಕಟಪೂರ್ವ ಅಧ್ಯಕ್ಷರೂ, ಸಾಹಿತಿಗಳಾದ ವಿಜಯಾ ಶ್ರೀಧರ್ 'ಕವನದಲ್ಲರಳಿದ ತಿನಿಸುಗಳು' ಕೃತಿ ಪರಿಚಯ ಮಾಡಿಕೊಟ್ಟರು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಸುಮತಿ ಜಯಪ್ಪ ಅವರು ಆಶಯ ನುಡಿಗಳನ್ನಾಡಿದರು.

ಕರ್ನಾಟಕ ಲೇಖಕಿಯರ ಸಂಘದ ದಾವಣಗೆರೆ ಜಿಲ್ಲಾಧ್ಯಕ್ಷರಾದ ವೀಣಾ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಹಿರಿಯ ಸಾಹಿತಿ ನೀಲಗುಂದ ಜಯಮ್ಮ ಮತ್ತಿತರರು ಉಪಸ್ಥಿತರಿದ್ದರು.

# ಜಲರಕ್ಷಣೆಗೆ ಸಮುದಾಯ ಬಳಕೆ

ಬೆಂಗಳೂರು, ಆ.5 - ಜಲಮೂಲಗಳಾದ ನದಿ, ಕೆರೆ ಮತ್ತು ನಾಲೆಗಳ ಸಂರಕ್ಷಣೆಗೆ ಸ್ವಯಂ ಸೇವಕರು ಹಾಗೂ ಗ್ರಾಮೀಣ ಸಮುದಾಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಸಣ್ಣ ನೀರಾವರಿ ಇಲಾಖೆ ಚಿಂತನೆ ನಡೆಸಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್ ಬೋಸರಾಜು ತಿಳಿಸಿದರು.

ಆರ್ಟ್ ಆಫ್ ಲಿವಿಂಗ್ ರಿವರ್ ರಿಜ್ಯೂವಿನೇಷನ್ ಸಂಸ್ಥೆಯ ರಾಷ್ಟ್ರೀಯ ನಿರ್ದೇಶಕರಾದ ಡಾ. ಲಿಂಗರಾಜು ಯಾಲೆ ಅವರ ನೇತೃತ್ವದ ತಂಡದೊಂದಿಗೆ ರಾಜ್ಯದ ಕೆರೆಗಳ ಅಧ್ಯಯನ ಹಾಗೂ ಜಲಮೂಲಗಳ ಪುನರುಜ್ಜೀವನದ ಬಗ್ಗೆ ಚರ್ಚೆ ನಡೆಸಿ ಮಾತನಾಡಿದರು.

ಸಭೆಯಲ್ಲಿ ರಾಜ್ಯದ ಜಲಮೂಲಗಳನ್ನು ಪುನರುಜ್ಜೀವನಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದಂತಹ ಅಂಶಗಳ ಬಗ್ಗೆ ಹಾಗೂ ರಾಜ್ಯ ಮತ್ತು ದೇಶದ ವಿವಿಧ ಭಾಗಗಳಲ್ಲಿ ಈಗಾಗಲೇ ಕೈಗೊಳ್ಳಲಾಗುತ್ತಿರುವ ಯೋಜನೆಗಳ ಬಗ್ಗೆ ಆರ್ಟ್ ಆಫ್ ಲಿವಿಂಗ್ ರಿವರ್ ರಿಜ್ಯೂವಿನೇಷನ್ ಸಂಸ್ಥೆಯ ಪ್ರಮುಖರು ಸಚಿವರಿಗೆ ಮಾಹಿತಿ ನೀಡಿದರು.

ನೈಸರ್ಗಿಕ ಕ್ರಮಗಳ ಆಧಾರದ ಮೇಲೆ ಬತ್ತಿರುವ ಹಾಗೂ ಕ್ಷೀಣಿಸುತ್ತಿರುವ ಜಲಮೂಲಗಳನ್ನ ಪುನರುಜ್ಜೀವನಗೊಳಿಸಬಹುದಾಗಿದೆ. ಈ ನಿಟ್ಟಿನಲ್ಲಿ ಸಂಸ್ಥೆ ದೇಶಾದ್ಯಂತ ವ್ಯಾಪಕವಾಗಿ ಕಾರ್ಯನಿರ್ವಹಿಸುತ್ತಿದೆ.

ಕುಮದ್ವತಿ, ಸುವರ್ಣಮುಖಿ ಸೇರಿದಂತೆ ಹಲವಾರು ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂಬ ಮಾಹಿತಿ ನೀಡಿದರು.

ಕೆರೆಗಳು, ನಾಲೆಗಳು ಹಾಗೂ ಜಲಮೂಲಗಳ ಸಂರಕ್ಷಣೆ ಮತ್ತು ಅವುಗಳ ಒತ್ತುವರಿಯನ್ನು ತಡೆಗಟ್ಟುವುದು ನಮ್ಮ ಪ್ರಮುಖ ಆದ್ಯತೆಯಾಗಿದೆ. ಸಂರಕ್ಷಣೆ ಮತ್ತು ಒತ್ತುವರಿ ತಡೆಗಟ್ಟುವ ನಿಟ್ಟಿನಲ್ಲಿ ಸಾರ್ವಜನಿಕರ ಸಹಭಾಗಿತ್ವ ಬಹಳ ಪ್ರಮುಖವಾಗಿದೆ.

ಜಲಮೂಲಗಳ ಸಂರಕ್ಷಣೆಗೆ ಸ್ವಯಂ ಸೇವಕರು ಮತ್ತು ಗ್ರಾಮೀಣ ಸಮುದಾಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ನಿಟ್ಟಿನಲ್ಲೂ ಚಿಂತಿಸಲಾಗುತ್ತಿದೆ ಎಂದು ಹೇಳಿದರು.

# ದಾವಣಗೆರೆ ಅರ್ಬನ್ ಕೋ-ಆಪ್.ಬ್ಯಾಂಕ್‌ನ ಎಸ್. ರಾಜಶೇಖರ್ ಅವರಿಗೆ ಬೀಳ್ಕೊಡುಗೆ



ದಾವಣಗೆರೆ, ಆ.5- ನಗರದ ದಾವಣಗೆರೆ ಅರ್ಬನ್ ಕೋ-ಆಪ್. ಬ್ಯಾಂಕಿನಲ್ಲಿ ಸಹಾಯಕರಾಗಿ ಕಾರ್ಯ ನಿರ್ವಹಿಸಿ ಜುಲೈ 31 ರಂದು ವಯೋ ನಿವೃತ್ತಿ ಹೊಂದಿರುವ ಎಸ್. ರಾಜಶೇಖರ್ ಅವರಿಗೆ ಹೃದಯಸ್ಪರ್ಶಿಯಾಗಿ ಬೀಳ್ಕೊಡಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಪ್ರಧಾನ ವ್ಯವಸ್ಥಾಪಕ ಬಿ.ಎಸ್.ಮಲ್ಲೇಶ್ ವಹಿಸಿದ್ದರು. ಉಪ ಪ್ರಧಾನ ವ್ಯವಸ್ಥಾಪಕ ಆರ್.ಎ.ಪ್ರಸನ್ನ, ವ್ಯವಸ್ಥಾಪಕರುಗಳಾದ ಲ್. ಎಸ್.ಗೀತಾ, ಕೆ.ಬಿ. ಸಾನಂದ ಗಣೇಶ್, ಹೆಚ್.ವಿ. ರುದ್ರೇಶ್, ಜಿ.ಕೆ.ವಿಜಯ ಕುಮಾರ್, ಕೆ.ಎಸ್.ಮಹೇಶ್, ಸಿಬ್ಬಂದಿ ಡಿ.ಶಿವರುದ್ರಪ್ಪ ಅವರುಗಳು ನಿವೃತ್ತರ ಸೇವೆಯನ್ನು ಸ್ಮರಿಸಿದರು. ಬ್ಯಾಂಕಿನ ವತಿಯಿಂದ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಡಿ.ಇ.ಸಿಂಧು ಪ್ರಾರ್ಥಿಸಿದರು. ಕೆ.ಶಿಲ್ಪಾ ಸ್ವಾಗತಿಸಿದರು. ಹೆಚ್.ವಿ. ರುದ್ರೇಶ್ ವಂದಿಸಿದರು. ಟಿ. ಎಸ್.ರುದ್ರೇಶ್ ನಿರೂಪಣೆ ಮಾಡಿದರು. ಎಸ್. ರಾಜಶೇಖರ್ ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಕಾರ್ಯನಿರ್ವಾಹಕ ಮಂಡಳಿ ಸದಸ್ಯರು, ಸಿಬ್ಬಂದಿ ವರ್ಗದವರು ಹಾಗೂ ಪಿಗ್ಮಿ ಸಂಗ್ರಾಹಕರು ಹಾರೈಸಿದರು.

# ನಗರದಲ್ಲಿ ಇಂದು ಸಾಕ್ಷರತಾ ಪರೀಕ್ಷೆ

ಇಂದು ಬೆಳಿಗ್ಗೆ 8.30 ರಿಂದ ಸಂಜೆ 5.30 ರವರೆಗೆ 6 ತಾಲ್ಲೂಕು ವ್ಯಾಪ್ತಿಯ 107 ಸರ್ಕಾರಿ ಪ್ರಾಥಮಿಕ ಪ್ರೌಢಶಾಲಾ ಪರೀಕ್ಷಾ ಕೇಂದ್ರಗಳಲ್ಲಿ ಸಾಕ್ಷರತಾ ಪರೀಕ್ಷೆಯನ್ನು ಆಯೋಜಿಸಲಾಗಿದೆ.

ಪ್ರಸಕ್ತ ಸಾಲಿನ ಸಾಕ್ಷರತಾ ಕಾರ್ಯಕ್ರಮದಡಿ 15 ವರ್ಷಕ್ಕಿಂತ ಮೇಲ್ಪಟ್ಟ ನೋಂದಣಿಯಾದ 15224 ಅನಕ್ಷರಸ್ಥ ಕಲಿಕಾರ್ಥಿಗಳಿಗೆ ಈಗಾಗಲೇ ಕಲಿಕಾ ಕಾರ್ಯ ಪೂರ್ಣಗೊಳಿಸಿದ್ದು, ಈ ಕಲಿಕಾರ್ಥಿಗಳಿಗೆ 3 ಅವಧಿಯಲ್ಲಿ ಪರೀಕ್ಷೆ ಜರುಗಲಿದೆ ಎಂದು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಹಾಗೂ ಜಿಲ್ಲಾ ಲೋಕ ಶಿಕ್ಷಣ ಸಮಿತಿಯ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಯಕ್ಷರಂಗದ ಸಭೆ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆ ಯಕ್ಷರಂಗ ಯಕ್ಷಗಾನ ಸಂಸ್ಥೆಯ ಸರ್ವ ಸದಸ್ಯರ ಮಹಾಸಭೆಯು ಯಕ್ಷರಂಗದ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 11 ಕ್ಕೆ ಕಲಾಕುಂಚ ಕಛೇರಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಯಕ್ಷರಂಗದ ಗೌರವ ಅಧ್ಯಕ್ಷ ಬಿ. ಶಾಂತಪ್ಪ ಪೂಜಾರ್ ತಿಳಿಸಿದ್ದಾರೆ.

# ತೆಲಿಗಿ ಗ್ರಾ.ಪಂಚಾಯ್ತಿಗೆ ಕಪ್ಪೇರ ರೇಖಮ್ಮ ಅಧ್ಯಕ್ಷೆ



ಹರಪನಹಳ್ಳಿ, ಆ. 5 - ತೆಲಿಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಪ್ಪೇರ ರೇಖಮ್ಮ ಹಾಗೂ ಉಪಾಧ್ಯಕ್ಷರಾಗಿ ಕೆ. ಲೋಕೇಶಪ್ಪನವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಜಯಸಿಂಹ ಘೋಷಿಸಿದರು.

ತಾಲ್ಲೂಕಿನ ತೆಲಿಗಿ ಗ್ರಾಮ ಪಂಚಾಯಿತಿಗೆ ಶನಿವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಪ್ಪೇರ ರೇಖಮ್ಮ ಗಣೇಶ ಹಾಗೂ ಉಪಾಧ್ಯಕ್ಷರಾಗಿ ಕೆ. ಲೋಕೇಶಪ್ಪನವರು ಮಾತ್ರ ನಾಮಪತ್ರ ಸಲ್ಲಿಸಿರುವುದರಿಂದ ಅಧ್ಯಕ್ಷ, ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಜಿ.ಬಿ.ಟಿ. ಮಹೇಶ, ತೆಲಿಗಿ ಕೆ. ಯೋಗೇಶ, ಕೆ. ಗಣೇಶ, ಎಸ್. ಮಂಜುನಾಥ, ಟಿ. ಉಮಾಕಾಂತ, ಟಿ. ಮಂಜುನಾಥ, ಜಿ. ಹಾಲೇಶಪ್ಪ, ಕೆ. ಮಂಜಪ್ಪ, ಎಸ್.ಬಿ. ರೇಖಾ, ಕೆ. ಸುರೇಶ್, ವಿರೇಶ್, ಆರ್. ಮಹೇಶ, ಎಂ. ಮಮತ, ಕೆ. ಕಾಳಮ್ಮ, ಸುಶೀಲಮ್ಮ ಕೆ. ಕವಿತಾ, ಪಿಡಿಓ ಎಸ್. ಮಂಜುನಾಥ, ಕಾರ್ಯದರ್ಶಿ ಕೆ. ವಿಶ್ವನಾಥ, ಇತರರು ಇದ್ದರು.

# ನಗರದಲ್ಲಿ ಇಂದು - ನಾಳೆ ಸಚಿವ ಎಸ್ಸೆಸ್ಸೆಂ ಕಾರ್ಯಕ್ರಮ



ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರು ಇಂದು ಮತ್ತು ನಾಳೆ ನಗರದಲ್ಲಿ ನಡೆಯಲಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಇಂದು ಮಧ್ಯಾಹ್ನ 12 ಗಂಟೆಗೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಗೃಹಜ್ಯೋತಿ ಅನುಷ್ಠಾನ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಸಾರ್ವಜನಿಕರ ಭೇಟಿ ಮತ್ತು ಕುಂದು-ಕೊರತೆಗಳ ವಿಚಾರಣೆ ಹಾಗೂ ದಾವಣಗೆರೆ ಮತ ಕ್ಷೇತ್ರ ವ್ಯಾಪ್ತಿಯ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಾಸ್ತವ್ಯ ಹೂಡುವರು. ನಾಳೆ ಸೋಮವಾರ ಮತ ಕ್ಷೇತ್ರ ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಸಚಿವರು ಭಾಗವಹಿಸಿ ವಾಸ್ತವ್ಯ ಹೂಡುವರು.

# ಹಳೆ ಪಿಂಚಣಿಗಾಗಿ ರೈಲ್ವೆ ಒಕ್ಕೂಟಗಳ ಹೋರಾಟ

ನವದೆಹಲಿ, ಆ. 5 - ಹಳೆಯ ಪಿಂಚಣಿ ಪದ್ಧತಿ ಜಾರಿಗೆ ತರುವಂತೆ ಒತ್ತಾಯಿಸಿ ಎರಡು ರೈಲ್ವೆ ಒಕ್ಕೂಟಗಳು ಆಗಸ್ಟ್ 10ರಂದು ಸಮಾವೇಶ ನಡೆಸಲಿವೆ. ಎನ್.ಎಫ್.ಐ.ಆರ್. ಹಾಗೂ ಯು.ಆರ್.ಎಂ.ಯು. ಸಂಘಟನೆಗಳು ರಾಮಲೀಲಾ ಮೈದಾನದಲ್ಲಿ ಪ್ರತಿಭಟನೆ ನಡೆಸಲಿವೆ. ಇತರೆ ರೈಲ್ವೆ ಒಕ್ಕೂಟಗಳೂ ಈ ಹೋರಾಟಕ್ಕೆ ಬೆಂಬಲಿಸಿವೆ. ಸರ್ಕಾರ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್.ಪಿ.ಎಸ್.) ಜಾರಿಗೆ ತರುತ್ತಿರುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಗುತ್ತಿದೆ.

# ತಕ್ಷಣವೇ ನಾಲೆಗಳಿಗೆ ನೀರು ಹರಿಸಲು ಒತ್ತಾಯ

## ಜಿಲ್ಲಾ ಬಿಜೆಪಿ ಆಗ್ರಹ



ದಾವಣಗೆರೆ, ಆ.5- ತಕ್ಷಣವೇ ನಾಲೆಗಳಿಗೆ ಭದ್ರಾ ನೀರು ಹರಿಸಬೇಕು ಎಂದು ಜಿಲ್ಲಾ ಬಿಜೆಪಿ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಿದೆ.

ಆಗಸ್ಟ್ ಮೊದಲ ವಾರದಲ್ಲಿಯೇ ಮುಂಗಾರು ಹಂಗಾಮಿನ ಭತ್ತದ ನಾಟಿ ಮಾಡಬೇಕು. ತಡವಾದರೆ ಹೂವಾಡುವ ಹಂತದಲ್ಲಿ ಮೂಡು ಗಾಳಿಯಿಂದ ಬೆಳೆ ಶೀತಕ್ಕೆ ಸಿಲುಕಿ ಇಳುವರಿ ಕುಂಠಿತವಾಗುತ್ತದೆ ಎಂದು ಕೃಷಿ ಇಲಾಖೆ ಜಿಲ್ಲೆಯ ರೈತರಿಗೆ ಸಲಹೆ ನೀಡಿದೆ. ಆದರೆ ಆಗಸ್ಟ್ ಮೊದಲ ವಾರದ ಕೊನೆ ದಿನವಾದರೂ ಭದ್ರಾ ನೀರು ಹರಿಸುವ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಇದರಿಂದ ರೈತರು ಕಂಗಾಲಾಗಿದ್ದಾರೆ. ಆದ್ದರಿಂದ ಇಂದಿನಿಂದ ನಾಲೆಗಳಿಗೆ ನೀರು ಹರಿಸಬೇಕು ಎಂದು ಬಿಜೆಪಿ ನಿಯೋಗ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.

ಭದ್ರಾ ಅಚ್ಚುಕಟ್ಟು ಪ್ರದೇಶದ ಬಹುತೇಕ ರೈತರು ಬೇರೆ ಮೂಲಗಳಿಂದ ನೀರು ಬಳಸಿ, ಸಸಿಮಡಿ ಸಿದ್ದಪಡಿಸಿಕೊಂಡು, ನಾಟಿ ಮಾಡುವ ಸಲುವಾಗಿ ನಾಲೆಗೆ ನೀರು ಹರಿಸುವುದನ್ನು ಕಾಯುತ್ತಿದ್ದಾರೆ. ಆದ್ದರಿಂದ ನೀರು ಹರಿಸಿ ರೈತರ ನೆರವಿಗೆ ಧಾವಿಸಬೇಕು ಎಂದು ಕಳೆದ 10 ದಿನಗಳಿಂದಲೂ ಬಿಜೆಪಿ ಮತ್ತು ರೈತರ ಸಂಘಟನೆಗಳು ಒತ್ತಾಯ ಮಾಡುತ್ತಿದ್ದರೂ ಜಿಲ್ಲಾಡಳಿತ ಕಣ್ಣು ಕಿವಿ ಇಲ್ಲವೆಂಬಂತೆ ದಿವ್ಯ ಮೌನ ವಹಿಸಿದೆ. ರೈತಪರ ಕಾಳಜಿ ಇಲ್ಲ.

ಆಗಸ್ಟ್ ಮೊದಲ ವಾರದಲ್ಲಿ ನೀರು ಬಿಡುವುದಾಗಿ ಹೇಳಿಕೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನರವರು ಯಾವ ಕ್ರಮ ಕೈಗೊಳ್ಳದಿರುವುದು ರೈತರಿಗೆ ಸೋಜಿಗ ತಂದಿದೆ. ಇದರಿಂದ ರೈತರು ತಲೆ ಮೇಲೆ ಕೈ ಹೊತ್ತು ಕುಳಿತು ಕೊಳ್ಳುವಂತೆ ಆಗಿದೆ.

ಮುಂದಿನ ದಿನಗಳಲ್ಲಿ ಇನ್ನೂ ಮಳೆ ಬರುವ ಸಾಧ್ಯತೆಗಳಿವೆ. ಆದ್ದರಿಂದ ಇಂದಿನಿಂದಲೇ ತಕ್ಷಣವೇ ನೀರು ಬಿಡುವ ನಿರ್ಧಾರ ಮಾಡಬೇಕು ಎಂದು ಜಿಲ್ಲಾಧಿಕಾರಿಗಳನ್ನು ಆಗ್ರಹಿಸಲಾಯಿತು

ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಯವರ ನೇತೃತ್ವದ ನಿಯೋಗದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ. ಎಸ್. ಜಗದೀಶ್, ಬಿಜೆಪಿ ಮುಖಂಡರಾದ ಕೊಳೇನಹಳ್ಳಿ ಬಿ. ಎಂ .ಸತೀಶ್, ಮಳಲ್ಕೆರೆ ಸದಾನಂದಪ್ಪ, ಆರನೇಕಲ್ಲು ವಿಜಯಕುಮಾರ, ಹೊಸಹಳ್ಳಿ ಶಿವಮೂರ್ತಿ, ಮಾಜಿ ಮೇಯರ್ ಹೆಚ್. ಎನ್. ಗುರುನಾಥ್ ಮುಂತಾದವರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಸುನಂದ 'ನೆನಪು ನಿರಂತರ' ಕಾರ್ಯಕ್ರಮ



ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾಗಿದ್ದ ವಿಚಾರವಾದಿ, ಆಂದೋಲನಗಾರ್ತಿ ಶ್ರೀಮತಿ ಸುನಂದ ದುರುಗೇಶ್ ಅವರ 'ನೆನಪು ನಿರಂತರ' ಕಾರ್ಯಕ್ರಮವು ಇಂದು ಬೆಳಿಗ್ಗೆ 10.30 ಕ್ಕೆ ನಗರದ ಕೆ.ಇ.ಬಿ. ಸಮುದಾಯ ಭವನದಲ್ಲಿ ಹಮ್ಮಿಕೊಳ್ಳ ಲಾಗಿದೆ .

ಹಿಮಾಚಲ ಪ್ರದೇಶದ ವಿಶ್ರಾಂತ ಮುಖ್ಯ ನ್ಯಾಯಾಧೀಶರಾದ ಎಲ್. ನಾರಾಯಣಸ್ವಾಮಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಮಾಜಿ ಸಚಿವ ಹೆಚ್. ಆಂಜನೇಯ, ಚಿತ್ರದುರ್ಗ ನವಯಾನ ಬುದ್ಧ ದಮ್ಮ ಉಪಾಸಕ ಪ್ರೊ.ಸಿ.ಕೆ.ಮಹೇಶ್ವರಪ್ಪ, ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಭಾಗವಹಿಸಲಿದ್ದಾರೆ.

# ಕುರ್ಕಿಯಲ್ಲಿ ಇಂದು ಶಾಸಕ ಕೆ.ಎಸ್.ಬಸವಂತಪ್ಪ ಅವರಿಗೆ ಸನ್ಮಾನ

ಮಾಯಕೊಂಡ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿರುವ ನೂತನ ಶಾಸಕ ಕೆ.ಎಸ್. ಬಸವಂತಪ್ಪ ಇವರಿಗೆ ಕುರ್ಕಿ ಗ್ರಾಮಸ್ಥರು ಮತ್ತು ಗ್ರಾಮದ ವಿವಿಧ ಸಂಘ-ಸಂಸ್ಥೆಗಳಿಂದ ಕೆ.ಜಿ ಮುರುಗೇಂದ್ರಪ್ಪ ಬಯಲು ರಂಗ ಮಂದಿರದಲ್ಲಿ ಇಂದು ಸಂಜೆ 4 ಗಂಟೆಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ.

ಗ್ರಾ.ಪಂ. ಅಧ್ಯಕ್ಷ ಬಿ.ಜಿ. ನಂದ್ಯಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಗ್ರಾಮದ ಗಣ್ಯ ವ್ಯಕ್ತಿಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಡಾ. ಹೆಚ್. ಎಸ್. ಮಂಜುನಾಥ ಕುರ್ಕಿ ತಿಳಿಸಿದ್ದಾರೆ.

# ರಾಹುಲ್ ಗಾಂಧಿಯವರ ಲೋಕಸಭಾ ಸದಸ್ಯತ್ವವನ್ನು ಮರುಸ್ಥಾಪನೆ ಮಾಡಲಿ



ದಾವಣಗೆರೆ, ಆ.5- ಗುಜರಾತ್ ನ ಸೂರತ್ ನ್ಯಾಯಾಲಯವು ರಾಹುಲ್‌ಗಾಂಧಿ ಅವರಿಗೆ ಶಿಕ್ಷೆ ವಿಧಿಸಿದ ಕೆಲವೇ ಗಂಟೆಗಳಲ್ಲಿ ಅವರ ಲೋಕಸಭಾ ಸದಸ್ಯತ್ವವನ್ನು ರದ್ದು ಮಾಡಿದ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ರವರು ತೀರ್ಮಾನ ಕೈಗೊಂಡಿದ್ದರು. ಇದೀಗ ಸುಪ್ರೀಂ ಕೋರ್ಟ್ ಶಿಕ್ಷೆಗೆ ಮಧ್ಯಂತರ ತಡೆಯಾಜ್ಞೆ ನೀಡಿ ಆದೇಶಿಸಿದೆ. ಈಗ ರಾಹುಲ್ ಗಾಂಧಿಯವರ ಲೋಕಸಭಾ ಸದಸ್ಯತ್ವದ ಮರುಸ್ಥಾಪನೆಗೂ ಸ್ಪೀಕರ್ ಅದೇ ಆತುರ ತೋರಲಿ ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಆಗ್ರಹಿಸಿದ್ದಾರೆ.

# ನಗರದಲ್ಲಿ ಸಂತೋಷದ ಕಾರ್ಯಾಗಾರ

ದಾವಣಗೆರೆ, ಆ.5- ನಗರದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ವನ್ನು ನಗರದ ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆಯ ಮೇಲ್ಗಡೆ ಇದೇ ದಿನಾಂಕ 8 ರಿಂದ 13 ರವರೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಾಗಾರವು ಬೆಳಿಗ್ಗೆ 6 ರಿಂದ 8 ರವರೆಗೆ ನಡೆಯಲಿದೆ. ಕುಂದುವಾಡ ರಸ್ತೆ ಪಿ.ಎ.ಸಿ.ಇ. ಸಭಾಂಗಣದಲ್ಲಿ 2 ಬ್ಯಾಚ್‌ಗಳಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ಮೊ. ಸಂಖ್ಯೆ : 98867 36836, 77601 55659.

ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : ಪ್ರಿಯಾಂಕ ಜೆ.ಪಿ., ಇಂಜಿನಿಯರ್

+91 70190 70400

#1066, 2ನೇ ಮೇನ್, 1ನೇ ಕ್ರಾಸ್, ಓಂಕಾರ ಗಣಪತಿ ದೇವಸ್ಥಾನ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ-577004.

ಶ್ರಾವಣ ಮತ್ತು ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ

ಡಬಲ್ ಡಿಸ್ಕೌಂಟ್

ಗೌಡರ ಜಯದೇವಪ್ಪ ಸಿಲ್ಕ್ಸ್ & ಸ್ಯಾರೀಸ್

ಗೌಡರ ಜಯದೇವಪ್ಪ ಸಿಲ್ಕ್ ಪ್ಯಾಲೇಸ್ (AC Show Room)

ರೇಷ್ಮೇ ಸೀರೆಗಳಿಗೆ 20% + 10% ರಿಯಾಯಿತಿ

09-07-2023 ರಿಂದ ಪ್ರಾರಂಭ

ಚೌಕಿಪೇಟೆ, ದಾವಣಗೆರೆ - 577001 ಫೋನ್ : 08192-296699, 08192-296688

ಆಯ್ದ ಸೀರೆಗಳಿಗೆ 30% ರಿಂದ 50% ರಿಯಾಯಿತಿ


## ಸಿರಿಗೆರೆಯಲ್ಲಿ ನಾಳೆ ಸದ್ಧರ್ಮ ನ್ಯಾಯಪೀಠದ ಕಲಾಪ ಇಲ್ಲ



ಸಿರಿಗೆರೆ, ಆ.5- ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರು ಅಮೆರಿಕಾ, ಜರ್ಮನಿ, ಆಸ್ಟ್ರಿಯಾ ಮುಂತಾದ ದೇಶಗಳಲ್ಲಿ ನಡೆಯುವ ಅಂತರರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ತೆರಳಿದ್ದು, ಈ ಕಾರಣದಿಂದಾಗಿ ನಾಡಿದ್ದು ದಿನಾಂಕ 7 ಮತ್ತು ಇದೇ ದಿನಾಂಕ 14 ಈ ಎರಡು ಸೋಮವಾರಗಳು ಸದ್ಧರ್ಮ ನ್ಯಾಯಪೀಠದ ಕಾರ್ಯಕಲಾಪಗಳು ನಡೆಯುವುದಿಲ್ಲ ಎಂದು ಪೀಠದ ಕಾರ್ಯದರ್ಶಿ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 08194-268829, 268848.

## ನಗರದಲ್ಲಿ ಇಂದು ಗೃಹಜ್ಯೋತಿ ಯೋಜನೆಗೆ ಸಚಿವ ಎಸ್ಸೆಸ್ಸೆಂ ಚಾಲನೆ



ರಾಜ್ಯ ಸರ್ಕಾರದ ಗೃಹಜ್ಯೋತಿ ಯೋಜನೆ ಚಾಲನಾ ಕಾರ್ಯಕ್ರಮವು ಶಾಮನೂರು ಶಿವ ಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಕಾರ್ಯಕ್ರಮದ ಉದ್ಘಾಟನೆ ಮತ್ತು ಅಧ್ಯಕ್ಷತೆ ವಹಿಸುವರು. ಇಂಧನ ಸಚಿವ ಕೆ.ಜೆ. ಜಾರ್ಜ್ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ಶಾಸಕ ಶಾಮನೂರು ಶಿವಶಂಕರಪ್ಪ, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಜಗಳೂರು ಶಾಸಕ ಬಿ. ದೇವೇಂದ್ರಪ್ಪ, ಹೊನ್ನಾಳಿ ಶಾಸಕ ಶಾಂತನಗೌಡ ಡಿ.ಜಿ, ಚನ್ನಗಿರಿ ಶಾಸಕ ಬಸವರಾಜು ವಿ. ಶಿವಗಂಗಾ, ಹರಿಹರ ಶಾಸಕ ಬಿ.ಪಿ. ಹರೀಶ್, ಹರಪನಹಳ್ಳಿ ಶಾಸಕ ಎಂ.ಪಿ. ಲತಾ ಮಲ್ಲಿಕಾರ್ಜುನ್, ಮೇಯರ್ ವಿನಾಯಕ ಪೈಲ್ವಾನ್, ವಿಧಾನ ಪರಿಷತ್ ಶಾಸಕರಾದ ಕೆ.ಅಬ್ದುಲ್ ಜಬ್ಬಾರ್ ಮತ್ತಿತರರು ಉಪಸ್ಥಿತರಿರುವರು.

ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ. ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಕೆ. ಅರುಣ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸುರೇಶ್ ಬಿ. ಇಟ್ನಾಳ್ ಉಪಸ್ಥಿತರಿರುವರು.

# ಆರೋಗ್ಯಕಾರಿ ಮಾಧ್ಯಮದಿಂದ ಆರೋಗ್ಯಕಾರಿ ಸಮಾಜ ಸಾಧ್ಯ

**ದಾವಿವಿ ಕಾರ್ಯಾಗಾರದಲ್ಲಿ ಕೊಪ್ಪಳ ವಿವಿ ಕುಲಪತಿ ಪ್ರೊ. ಬಿ.ಕೆ. ರವಿ ಅಭಿಮತ**

ದಾವಣಗೆರೆ, ಆ. 5- ಆರೋಗ್ಯಕಾರಿ ಮಾಧ್ಯಮದಿಂದ ಮಾತ್ರ ಆರೋಗ್ಯಕಾರಿ ಸಮಾಜ ನಿರ್ಮಾಣ ಸಾಧ್ಯ ಎಂದು ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಕೆ. ರವಿ ಹೇಳಿದರು.

ದಾವಣಗೆರೆ ವಿವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂಹನ ಅಧ್ಯಯನ ವಿಭಾಗ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಶಾಖೆ, ಜಿಲ್ಲಾ ವರದಿಗಾರರ ಕೂಟದ ಸಹಯೋಗದಲ್ಲಿ ವಿವಿಯ ಎಂಬಿಎ ಸಭಾಂಗಣದಲ್ಲಿ ಏರ್ಪಡಿಸಿದ್ದ ಪತ್ರಿಕಾ ದಿನಾಚರಣೆ ಮತ್ತು 'ಡಿಜಿಟಲ್ ಯುಗದಲ್ಲಿ ಪತ್ರಕರ್ತರ ಭವಿಷ್ಯ' ಕುರಿತು ಶನಿವಾರ ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಸೃಜನಶೀಲತೆ ಮೈಗೂಡಿಸಿಕೊಂಡು ಸಮಾಜದ ಸ್ವಾಸ್ಥ್ಯ ಕಾಪಾಡುವ ನೈತಿಕೆ ಹೊಣೆಗಾರಿಕೆ ಪತ್ರಕರ್ತರ ಮೇಲಿದೆ. ಸಮಾಜ ನಮಗೇನು ಕೊಟ್ಟಿದೆ ಎಂಬುದರ ಜೊತೆಗೆ ಸಮಾಜಕ್ಕೆ ನಾವೇನನ್ನು ಕೊಡುತ್ತೇವೆ ಎಂಬುದೂ ಮುಖ್ಯ ಎಂದು ಹೇಳಿದರು. ಡಿಜಿಟಲ್ ಮಾಧ್ಯಮ ಬಳಕೆಯಿಂದಾಗಿ ಭಾಷೆಯ ಮೇಲೆ ಹೆಚ್ಚು ದಾಳಿಯಾಗುತ್ತಿದೆ. ಅದನ್ನು ತಡೆಗಟ್ಟುವುದು ಮುದ್ರಣ ಮಾಧ್ಯಮದಿಂದ ಸಾಧ್ಯ. ಕನ್ನಡ ಮತ್ತು ಕನ್ನಡ ಪತ್ರಿಕೆಗಳನ್ನು ಬಲಿಷ್ಟಗೊಳಿಸದ ಹೊರತು ಕನ್ನಡ ಭಾಷಾ ಬೆಳವಣಿಗೆ ಹೆಚ್ಚು ತೊಂದರೆಯಾಗುತ್ತದೆ ಎಂದು ಎಚ್ಚರಿಸಿದರು.

ಭಾರತೀಯ ಮಾಧ್ಯಮದ ಬೆಳವಣಿಗೆಯಲ್ಲಿ ಆಪಾರವಾದ ಖುಷಿ ಇದೆ. ವಾಣಿಜ್ಯೀಕರಣ ಹಾಗೂ ಬ್ರೇಕಿಂಗ್ ನ್ಯೂಸ್ ಭರಾಟೆಯಲ್ಲಿ ಪತ್ರಕರ್ತರು ಸಾಮಾಜಿಕ ಹೊರಣೆಗಾರಿಕೆ ಮರೆಯಬಾರದು ಎಂದು ಕಿವಿಮಾತು ಹೇಳಿದರು.



**ನಮ್ಮನ್ನು ಬೆನ್ನುತಟ್ಟಿ ಪ್ರೋತ್ಸಾಹಿಸಿದ್ದು ಹೆಚ್.ಎನ್. ಷಡಾಕ್ಷರಪ್ಪ: ಪ್ರೊ.ಬಿ.ಕೆ. ರವಿ**

70ರ ದಶಕದಲ್ಲಿ ನಮ್ಮನ್ನು ಪ್ರೋತ್ಸಾಹಿಸಿ, ಬೆನ್ನುತಟ್ಟಿದ್ದವರು 'ಜನತಾವಾಣಿ' ಪತ್ರಿಕೆ ಸಂಪಾದಕರಾಗಿದ್ದ ಹೆಚ್.ಎನ್. ಷಡಾಕ್ಷರಪ್ಪನವರು ಎಂದು ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಕೆ. ರವಿ ನೆನಪಿಸಿಕೊಂಡರು. ನಾನು ಚಿತ್ರದುರ್ಗದಲ್ಲಿ ಪತ್ರಕರ್ತನಾಗಿ ಕಾರ್ಯ ನಿರ್ವಹಿಸಿದ್ದರೂ ದಾವಣಗೆರೆಯ ನಮ್ಮ ಪ್ರಿಯವಾದ ನಗರವಾಗಿತ್ತು. 50 ವರ್ಷದ ಹಿಂದೆ ದಾವಣಗೆರೆಯಲ್ಲಿ ಕನ್ನಡ ದಿನಪತ್ರಿಕೆ ಆರಂಭಿಸಿ ಯಶಸ್ವಿಯಾಗಿ ಮುನ್ನೆಡೆಯುತ್ತಿದ್ದು, ಹೆಚ್ಚೆನ್ನೆಸ್ ಅವರನ್ನು ಇಂದು ನೆನೆಯಲೇ ಬೇಕಿದೆ ಎಂದು ಹೇಳಿದರು. ಇದೇ ವೇಳೆ 'ನಗರವಾಣಿ'ಯ ನಾಗಮ್ಮ ಕೇಶವಮೂರ್ತಿ ಹಾಗೂ ಸಿ.ಕೇಶವಮೂರ್ತಿ ದಂಪತಿಯನ್ನೂ ರವಿ ಸ್ಮರಿಸಿದರು.

ರಾಷ್ಟ್ರದಲ್ಲಿ ಹಸಿರು ಕ್ರಾಂತಿಗೆ ಕಾರಣವಾಗಿದ್ದೇ ಮಾಧ್ಯಮ ಕ್ಷೇತ್ರ. ಅದರಲ್ಲಿ ಆಕಾಶವಾಣಿ ಕೊಡುಗೆ ಮರೆಯಲು ಸಾಧ್ಯವೇ ಇಲ್ಲ. ಆರೋಗ್ಯ, ಶಿಕ್ಷಣ, ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಮಾಧ್ಯಮ ಅಪಾರ ಕೊಡುಗೆ ನೀಡಿದೆ. ಮನುಷ್ಯನ ಜೀವನದಲ್ಲಿ ಅವಿನಾಭಾವ ಭಾಗವಾದ ಮನರಂಜನೆಯನ್ನೂ ಮಾಧ್ಯಮ ಕ್ಷೇತ್ರ ನೀಡುತ್ತಿದೆ ಎಂದರು.

ಪ್ರಸ್ತುತ ದಿನಗಳಲ್ಲಿ ತಂತ್ರಜ್ಞಾನದ ವೈಭವೀಕರಣ ನಡೆಯುತ್ತಿದೆ. ಆದರೆ ಸಂಹವನದ ಮೂಲ ಕ್ರಿಯೆ ಬದಲಾಗಿಲ್ಲ. ಆಗ 10ರಿಂದ 15 ದಿನಗಳ ಬಳಿಕ ಓದುಗರಿಗೆ ಸಿಗುತ್ತಿದ್ದ ಸುದ್ದಿ ಈಗ ಎರಡು ನಿಮಿಷದಲ್ಲಿ ಸಿಗುತ್ತಿದೆ. ಹೀಗೆ ಸಂದೇಶ ರವಾನೆಯ ವೇಗವರ್ಧಕ ಹೆಚ್ಚಿದೆ. ಮಾಧ್ಯಮ ರಂಗದಲ್ಲಿ ಸ್ಪರ್ಧೆ ಇದೆ ನಿಜ. ಆದರೆ, ಪತ್ರಕರ್ತರು ಯಾವುದೇ ಮಾಹಿತಿ ಸಿಕ್ಕಾಗ, ಅದರ ಪೂರ್ವಪರ ತಿಳಿದು ವರದಿ ಮಾಡಬೇಕು ಎಂದು ಸಲಹೆ ನೀಡಿದರು.

ಅನಿಮೇಷನ್ ತಂತ್ರಜ್ಞಾನ ಬಂದಾಗ, ಜಗತ್ತಿನ ಮನರಂಜನಾ ಕಾರ್ಖಾನೆಯನ್ನು ಕೊಳ್ಳೆ ಹೊಡೆದಿದ್ದ ಅಮೇರಿಕ, ಚೀನಾ, ಕೋರಿಯಾ ರಾಷ್ಟ್ರಗಳು ಈಗ ಭಾರತೀಯ ಮನರಂಜನಾ ವಲಯದಲ್ಲಿ ಬಂಡವಾಳ ಹೂಡಲು ತುದಿಗಾಲಲ್ಲಿ ನಿಂತಿವೆ. ಇನ್ನು ಎಷ್ಟೇ ಡಿಜಿಟಿಯಲ್ ಪ್ಲಾಟ್‌ಫಾರ್ಮ್‌ಗಳು ಬಂದರೂ ಮುದ್ರಣ ಮಾಧ್ಯಮಕ್ಕೆ ಮುಂದಿನ ಮೂರ್ನಾಲ್ಕು ದಶಕಗಳ ಕಾಲ ಉಜ್ವಲ ಭವಿಷ್ಯವಿದೆ. ಯುವ ಪೀಳಿಗೆಗೂ ಸಾಕಷ್ಟು ಅವಕಾಶಗಳಿವೆ ಎಂದು ಹೇಳಿದರು.

ಹಿಂದೆ ಬಂಡವಾಳ ಶಾಹಿಗಳು ಮಾತ್ರ ಮಾಧ್ಯಮ ಕ್ಷೇತ್ರಕ್ಕೆ ಬರಬಹುದಾಗಿತ್ತು. ಆದರೆ ಇಂದು ಬಡವರಿಗೆ ಅವಕಾಶಗಳಿವೆ. ಆದರೆ ಕಷ್ಟಪಟ್ಟು ಕೆಲಸ ಮಾಡಿದರೆ ಮಾತ್ರ ಯಶಸ್ಸು ಪಡೆಯಬಹುದಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಾವಣಗೆರೆ ವಿವಿ ಕುಲಪತಿ ಪ್ರೊ. ಬಿ.ಡಿ. ಕುಂಬಾರ ಮಾತನಾಡಿ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುದ್ದಿಗಳ ಪರಿಣಾಮ, ಅದೆಷ್ಟೋ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಮಗೆ ಸಮಾಜ ನಾಶ ಮಾಡುವ ಮಾಧ್ಯಮ ಬೇಡ. ಸುದ್ದಿಯಲ್ಲಿ ಸಮಾಜ ಬೆಳೆಸುವ ಶಕ್ತಿ ಇರಬೇಕೇ ಹೊರತು, ಒಡೆಯುವ ಅಂಶಗಳು ಇರಬಾರದು ಎಂದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಸಿ. ಲೋಕೇಶ್ ಉಪನ್ಯಾಸ ನೀಡಿದರು. ವಿಭಾಗದ ಮುಖ್ಯಸ್ಥ ಶಿವಕುಮಾರ್ ಕಣಸೋಗಿ ಪ್ರಾಸ್ತಾವಿಕ ಮಾತನಾಡಿದರು. ವಿವಿಯ ಕುಲಸಚಿವರಾದ ಬಿ.ಬಿ. ಸರೋಜಾ, ಡಾ. ಕೆ. ಶಿವಶಂಕರ್, ಜಿಲ್ಲಾ ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್, ಖಜಾಂಚಿ ಎನ್.ವಿ.ಬದ್ರಿನಾಥ್, ಸಂಘದ ರಾಜ್ಯ ಸದಸ್ಯ ಕೆ.ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ.ಒಡೆಯರ್, ಚಿತ್ರದುರ್ಗ ಜಿಲ್ಲಾಧ್ಯಕ್ಷ ದಿನೇಶ್ ಗೌಡಗೆರೆ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ, ಪ್ರಧಾನ ಕಾರ್ಯದರ್ಶಿ ಡಾ. ಸಿ. ವರದರಾಜ್ ಕಾರ್ಯಕ್ರಮದಲ್ಲಿದ್ದರು. ಪ್ರಾಧ್ಯಾಪಕ ಡಾ. ವಿನಯ್ ಸ್ವಾಗತಿಸಿದರು. ಪತ್ರಿಕೋದ್ಯಮ ವಿದ್ಯಾರ್ಥಿಗಳಾದ ಸಾಕೂಬಾಯಿ ಹಾಗೂ ದಿವ್ಯ ಪ್ರಾರ್ಥಿಸಿದರು.

## ಹರಿಹರಕ್ಕೆ ಇಂದು ಸಂಸದ ಸಿದ್ದೇಶ್ವರ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 9:30 ಕ್ಕೆ ಅಮೃತ ಭಾರತ ಸ್ಟೇಷನ್ ಯೋಜನೆಯಡಿ 23 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಹರಿಹರದ ನೂತನ ರೈಲ್ವೆ ನಿಲ್ದಾಣ ಕಾಮಗಾರಿಗೆ ಸಂಸದರು ಶಂಕುಸ್ಥಾಪನೆ ನೆರವೇರಿಸುವರು.

## ಉದ್ಯಮಿಗಳ ಸಾಲ ಮನ್ನಾದಿಂದ ದೇಶ ದಿವಾಳಿ ಆಗುವುದಿಲ್ಲವೇ?


ಬೆಂಗಳೂರು, ಆ. 5 - ಉದ್ಯಮಿಗಳ ಲಕ್ಷಾಂತರ ಕೋಟಿ ಸಾಲ ಮನ್ನಾದಿಂದ ದೇಶ ದಿವಾಳಿ ಆಗುವುದಿಲ್ಲವೇ? ಬಡವರಿಗೆ ಗ್ಯಾರಂಟಿ ಯೋಜನೆ ಕೊಟ್ಟರೆ ರಾಜ್ಯ ದಿವಾಳಿ ಆಗುತ್ತದೆಯೇ? ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

ರಾಜ್ಯದ ಬಡವರಿಗೆ 10 ಕೆ.ಜಿ ಅಕ್ಕಿ ಕೊಟ್ಟರೆ, ಅವರ ಮನೆಗೆ ಉಚಿತ ವಿದ್ಯುತ್, ಪ್ರತಿ ತಿಂಗಳು 2 ಸಾವಿರ ಪ್ರೋತ್ಸಾಹ ಹಣ, ಮಹಿಳೆಯರಿಗೆ ಬಸ್ ನಲ್ಲಿ ಉಚಿತ ಪ್ರಯಾಣ, ನಿರುದ್ಯೋಗಿ ಯುವಕರಿಗೆ ಶಕ್ತಿ ತುಂಬಿದರೆ ರಾಜ್ಯ ದಿವಾಳಿ ಆಗುತ್ತದೆಯೇ?



ದೇವರು ವರವನ್ನೂ ನೀಡುವುದಿಲ್ಲ, ಶಾಪವನ್ನು ನೀಡುವುದಿಲ್ಲ. ಕೇವಲ ಅವಕಾಶ ಮಾತ್ರ ನೀಡುತ್ತಾನೆ. ಅದರಂತೆ ಮಲ್ಲಿಕಾರ್ಜುನ ಖರ್ಗೆ ಅವರು ಈ ಕಲ್ಯಾಣ ಕರ್ನಾಟಕ ಭಾಗಕ್ಕೆ 370ಜೆ ಮೂಲಕ ವಿಶೇಷ ಸ್ಥಾನಮಾನ ನೀಡಿ ಈ ಜನರ ಬದುಕಿನಲ್ಲಿ ಬೆಳಕು ತಂದಿದ್ದರು. ಇಂದು ಕಾಂಗ್ರೆಸ್ ಪಕ್ಷ ಗೃಹಜ್ಯೋತಿ ಯೋಜನೆ ಜಾರಿಗೆ ತಂದು ನಿಮ್ಮ ಮನೆಗೆ ಬೆಳಕು ನೀಡಿದೆ ಎಂದರು.

## ನಗರದ ಗೀತಾ ಮಂದಿರದಲ್ಲಿಂದು ಮಡಲಕ್ಕಿ ಕಟ್ಟುವ ಕಾರ್ಯಕ್ರಮ



ಶ್ರೀ ಸಾಯಿ ಭಜನಾಮೃತ, ಶ್ರೀ ಶಿರಡಿ ಸಾಯಿಬಾಬ ಭಜನಾ ಮಂಡಳಿ, ಶ್ರೀ ಶಿರಡಿ ಸಾಯಿಬಾಬಾ ಸೇವಾ ಸಮಿತಿಯು ಪ್ರಾರಂಭವಾಗಿ ಆರು ವರ್ಷಗಳ ಸವಿನೆನಪಿಗಾಗಿ ಅಧಿಕ ಶ್ರಾವಣ ಮಾಸದ ಪ್ರಯುಕ್ತ ಕೋದಂಡರಾಮ ದೇವಸ್ಥಾನದ ಗೀತಾ ಮಂದಿರದಲ್ಲಿ ಇಂದು ಮಧ್ಯಾಹ್ನ 11.30 ರಿಂದ 2.30ರವರೆಗೆ ಮಡ್ಲಕ್ಕಿ ಕಟ್ಟುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾಯಿ ಟ್ರಸ್ಟ್ ಮತ್ತು ಸಾಯಿನಿತ್ಯ ಮಧ್ಯಾಹ್ನ ಪ್ರಸಾದ ಕಮಿಟಿ ಕುಟುಂಬದವರು, ಸಾಯಿ ಬಂಧುಗಳಿಗೆ ಸುಮಾರು 171 ಜನರಿಗೆ ಮಡ್ಲಕ್ಕಿ ಕಟ್ಟುವ ಕಾರ್ಯಕ್ರಮವಿದ್ದು, ಮಹಿಳೆಯರು ಹಸಿರು ಸೀರೆ ಧರಿಸಿ ಮಡ್ಲಕ್ಕಿ ಕಟ್ಟಿಸಿಕೊಳ್ಳಬೇಕಾಗಿ ವಿನಂತಿಸಲಾಗಿದೆ. ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ಶ್ರೀಮತಿ ರೇಖಾ ಗಣೇಶ್, ಬೆಂಗಳೂರಿನ ಶ್ರೀಮತಿ ಲವೀನಾ ಜನಾರ್ಧನ್ ಅವರ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಶ್ರೀಮತಿ ಸವಿತಾ ಗಿರೀಶ್ ಹೆಚ್.ಎ., ಶ್ರೀಮತಿ ರೂಪಾ ರಮೇಶ್ ಅಂಬರ್‌ಕರ್, ಶ್ರೀಮತಿ ಸವಿತಾ ಟಾಟಾ ಶಿವಣ್ಣ, ರವಿತೇಜ ಗ್ರೂಪ್ಸ್‌ನ ಮಲ್ಲಿಕಾರ್ಜುನ್, ಎನ್.ಎಂ. ಕಡೇಕೊಪ್ಪ ಕುಟುಂಬದವರು, ಟಿ.ಕೆ. ಚನ್ನಬಸಪ್ಪ ಮತ್ತು ಮಕ್ಕಳು, ಉತ್ತಂಗಿ ಪ್ರಕಾಶ್ ಮತ್ತು ಕುಟುಂಬ, ಆರ್.ಜಿ.ಶ್ರೀನಿವಾಸ್ ಮೂರ್ತಿ ಮತ್ತು ಕುಟುಂಬ, ವೈಬಿಎಸ್ ಸತೀಶ್ ಮತ್ತು ಕುಟುಂಬ, ಶ್ರೀಮತಿ ಲವೀನಾ ಜನಾರ್ಧನ್ ಮತ್ತು ಕುಟುಂಬ, ಶ್ರೀಮತಿ ಜಯಲಕ್ಷ್ಮಿ ಬಾಲಾಜಿ ಶ್ರೀನಿವಾಸ್ ಮತ್ತು ಮಕ್ಕಳು ಸೇವಾರ್ಥಿಗಳಾಗಿದ್ದಾರೆ.


ಅಡಿಕೆ ಸಸಿಗಳು ಮಾರಾಟಕ್ಕಿವೆ

ಚಿತ್ರಹಳ್ಳಿ ಗೋಟಿನ 1.5 - 2 ವರ್ಷದ ಉತ್ತಮ ಅಡಿಕೆ ಸಸಿಗಳು ದಾವಣಗೆರೆ ಹತ್ತಿರದ ಕೈದಾಳ್ ತೋಟದಲ್ಲಿ ಮಾರಾಟಕ್ಕಿವೆ.

2 KG Bag - Rs. 22/-

98807 39392

98807 43838


## ನಗರದಲ್ಲಿ ಇಂದು ಉಚಿತ ಹೃದಯ ಸಮಾಲೋಚನೆ, ತಪಾಸಣೆ

ಎಂ.ಸಿ.ಕಾಲೋನಿ 'ಬಿ' ಬ್ಲಾಕ್ 9ನೇ ಕ್ರಾಸ್‌ನಲ್ಲಿರುವ ದಾವಣಗೆರೆ ಹಾರ್ಟ್ ಆಸ್ಪತ್ರೆಯಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2ರವರೆಗೆ ಉಚಿತ ಹೃದಯ ಸಮಾಲೋಚನೆ ಕಾರ್ಯಕ್ರಮ ನಡೆಯಲಿದೆ. ಉಚಿತ ಇಸಿಜಿ, ಇಸಿಹೆಚ್‌ಓ ಹಾಗೂ ಮಕ್ಕಳ ಹೃದಯ ರೋಗಕ್ಕೆ ಉಚಿತ ಶಸ್ತ್ರ ಚಿಕಿತ್ಸೆ ನಡೆಸಲಾಗುವುದು. ಸಮಾಲೋಚನೆಯಲ್ಲಿ ಹೃದ್ರೋಗ ತಜ್ಞ ಡಾ.ಕೆ.ಎಸ್. ಸಂತೋಷ್ ಕುಮಾರ್ ಹಾಗೂ ಹೃದಯ ಶಸ್ತ್ರ ಚಿಕಿತ್ಸಕರಾದ ಡಾ. ಸಾಯಿ ಸೂರಜ್ ಉಪಸ್ಥಿತರಿರುವರು. ವಿವರಕ್ಕೆ ಸಂಪರ್ಕಿಸಿ : 63609 67090 / 93538 99577.

## 508 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಇಂದು ಪ್ರಧಾನಿ ಶಂಕುಸ್ಥಾಪನೆ

ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿ ಪ್ರಯಾಣಿಕರಿಗೆ ವಿಶ್ವದರ್ಜೆಯ ಸೌಲಭ್ಯಗಳನ್ನು ಒದಗಿಸಲು 1309 ನಿಲ್ದಾಣಗಳನ್ನು ಪುನರಾಭಿವೃದ್ಧಿ ಮಾಡುವ ಕಾರ್ಯವನ್ನು ರೈಲ್ವೆ ಇಲಾಖೆ ಕೈಗೊಂಡಿದೆ ಎಂದು ಮೈಸೂರು ವಿಭಾಗ ಹಿರಿಯ ವಿಭಾಗೀಯ ಕಾರ್ಯಾಚರಣೆ ವ್ಯವಸ್ಥಾಪಕ ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿ ಜೆ.ಲೋಹಿತೇಶ್ವರ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 9.15 ಅರಸೀಕೆರೆ ರೈಲು ನಿಲ್ದಾಣದಲ್ಲಿನ ಐತಿಹಾಸಿಕ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದಾದ್ಯಂತದ 508 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಶಂಕುಸ್ಥಾಪನೆ ಮಾಡುವುದಕ್ಕೆ ಇದು ಸಾಕ್ಷಿಯಾಗಲಿದೆ. ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಮತ್ತು ಶಾಸಕ ಬಿ.ಪಿ. ಹರೀಶ್ ಉಪಸ್ಥಿತರಿರುತ್ತಾರೆ


ಶೃತಿ ಮಾಕನೂರು ಅವರಿಗೆ ಡಾಕ್ಟರೇಟ್ : ಅಭಿನಂದನೆಗಳು

ಡಾ. ಜೆ.ಕೆ. ರಾಜು, BE, MBA, Ph.D
Professor & Chairman
Institute of Management Studies
Davanagere University.

ದಾವಣಗೆರೆಯ ಉದ್ಯಮಿ ಹಾಗೂ ಬಾಪೂಜಿ ಗೌವರ್ನಿಂಗ್ ಕೌನ್ಸಿಲ್ ಮೆಂಬರ್ ಆಗಿದ್ದ ದಿ. ಮಾಕನೂರು ಮಲ್ಲಿಕಾರ್ಜುನಪ್ಪ ಅವರ ಪುತ್ರಿ ಹಾಗೂ ಬಾಪೂಜಿ ಎಂ.ಬಿ.ಎ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಶೃತಿ ಮಾಕನೂರು ಇವರು ದಾವಣಗೆರೆ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಭಾಗದ ಚೇರ್‌ಮೆನ್ ಹಾಗೂ ಪ್ರಾಧ್ಯಾಪಕರಾದ ಡಾ. ಜೆ.ಕೆ. ರಾಜು ಇವರ ಮಾರ್ಗದರ್ಶನದಲ್ಲಿ ಮಂಡಿಸಿದ " A Study on work-life Balance Of Women Employees of Banking Sector in Karnataka " ಎಂಬ ಮಹಾಪ್ರಬಂಧಕ್ಕೆ ದಾವಣಗೆರೆ ವಿಶ್ವವಿದ್ಯಾನಿಲಯವು ಪಿಎಚ್‌ಡಿ ಪದವಿ ನೀಡಿ ಗೌರವಿಸಿದ್ದು, ಈ ಶುಭ ಸಂದರ್ಭದಲ್ಲಿ ಶ್ರೀಮತಿ ಶೃತಿ ಮಾಕನೂರು ಅವರಿಗೆ ನಮ್ಮ ಹಾರ್ದಿಕ ಅಭಿನಂದನೆಗಳು. ಶೃತಿ ಅವರಿಗೆ ಮಾರ್ಗದರ್ಶನ ಮಾಡಿದ ಪ್ರಾಧ್ಯಾಪಕರಾದ ಡಾ. ಜೆ.ಕೆ. ರಾಜು ಅವರಿಗೆ ಹೃದಯ ಪೂರ್ವಕ ಕೃತಜ್ಞತೆಗಳು.

ಶುಭ ಕೋರುವವರು : ✦ ಡಿ. ಕುಮಾರ್ ಮತ್ತು ಮಕ್ಕಳು, ಪ್ರೋ ಸ್ಟುಡಿಯೋ, ದಾವಣಗೆರೆ ಮತ್ತು ಹನಿ ಗಾರ್ಡನ್ ರೆಸ್ಟೋರೆಂಟ್, ಹನಗವಾಡಿ ಕ್ರಾಸ್ ✦ ಡಾ. ರವಿಕುಮಾರ್ ಪಾಟೀಲ್, ಪ್ರೊಫೆಸರ್, ದಾವಣಗೆರೆ ವಿಶ್ವವಿದ್ಯಾನಿಲಯ ✦ ಶ್ರೀಮತಿ ಮಂಜುಳ ಕೋಂ ದಿ. ಮಾಕನೂರು ವಿಜಯಕುಮಾರ್ ಮತ್ತು ಮಕ್ಕಳು ✦ ಶ್ರೀಮತಿ ಮತ್ತು ಶ್ರೀ ಶೈಲ ಸೋಮಶೇಖರ್ ಮತ್ತು ಮಕ್ಕಳು

ಕಾಲೇಜು ಆಡಳಿತ ಮಂಡಳಿ, ಬಾಪೂಜಿ ಇಂಜಿನಿಯರಿಂಗ್ ಕಾಲೇಜು ಮತ್ತು ಬಾಪೂಜಿ ಎಂಬಿಎ ವಿಭಾಗದ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳು, ದಾವಣಗೆರೆ ವಿಶ್ವವಿದ್ಯಾಲಯದ ಕಾಲೇಜು ಆಡಳಿತ ಮಂಡಳಿ, ಉಪನ್ಯಾಸಕ ವೃಂದ ಮತ್ತು ವಿದ್ಯಾರ್ಥಿಗಳು, ಮಾಕನೂರು ವಂಶಸ್ಥರು, ಯಲವಟ್ಟಿ ಗೌಡ್ರು ವಂಶಸ್ಥರು, ಹಿತೈಷಿಗಳು ಹಾಗೂ ಬಂಧು-ಮಿತ್ರರು.



BIG DEALS & BIG DISCOUNTS!

FURNITURE & HOME INTERIOR EXPO

BIG SALE

UPTO 70% OFF ON ALL FURNITURE

BIG EXCHANGE OFFER

NEW DESIGNS & STYLE

DATE & VENUE 4 5 6 7 8 AUG 2023 TIMING 10AM - 9.00PM

BAPUJI BANK SAMUDAYA BHAVANA, SHAMANUR, DAVANAGERE

| | | | | |
|---|---|---|---|---|
| MODERN SOFA SET | RECLINER SOFA CORNER SOFA SET | DINING ROOM FURNITURE | ITALIAN DESIGNER SOFAS | ANTIQUE & IRON FURNITURE |
| MASSAGE CHAIR | SHEESHAM WOOD FURNITURE | CARPET, RUGS & MATTRESSES | DECORATIVE ART & HANDICRAFTS | CARVED WOODEN SWING |

AMPLE CAR PARKING | ENTRY FREE | 91 96111 76669